# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹರಾದ ಶ್ರೀ ಮುಕುಂದ ಅವರು ಪುತ್ತೂರಿನ 'ಪಂಚವಟಿ' ಸಂಘ ಕಾರ್ಯಾಲಯದ ಲೋಕಾರ್ಪಣೆಯಲ್ಲಿ ಭಾಗವಹಿಸಿ ಮಾತನಾಡಿದರು.


ಸಂಪುಟ : 44 ಸಂಚಿಕೆ : 20 ಮಾಘ-ಫಾಲ್ಗುಣ ಕಲಿಯುಗಾಬ್ದ 5124 01-02-2023 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಒಗ್ಗಟ್ಟಾಗಿ ಕೆಲಸ ಮಾಡಿ ನಮ್ಮ ರಾಷ್ಟ್ರವನ್ನು ವೈಭವದ ಉತ್ತುಂಗಕ್ಕೆ ಕೊಂಡೊಯ್ಯಬೇಕು – ಡಾ. ಮೋಹನ್ ಭಾಗವತ್

ರಾಷ್ಟ್ರೀಯ ಸ್ವಯಂಸೇವಕ ಸಂಘ ಶತಮಾನೋತ್ಸವದತ್ತ ಸಾಗುತ್ತಿದೆ. ಈ ಸಂದರ್ಭದಲ್ಲಿ ಆರೆಸ್ಸೆಸ್‌ನ ಯೋಜನೆಗಳ ಕುರಿತು ಜನರ ಕುತೂಹಲ ದಿನೇದಿನೇ ಹೆಚ್ಚುತ್ತಿದೆ. ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್ ಅವರು ನಾಗಪುರದ ಪ್ರಧಾನ ಕಛೇರಿಯಲ್ಲಿ ಪಾಂಚಜನ್ಯದ ಸಂಪಾದಕರಾದ ಹಿತೇಶ್ ಶಂಕರ್ ಮತ್ತು ಆರ್ಗನೈಸರ್‌ನ ಸಂಪಾದಕರಾದ ಪ್ರಫುಲ್ಲ ಕೇತ್ಕರ್ ಅವರಿಗೆ ನೀಡಿದ ವಿಶೇಷ ಸಂವಾದದ ಆಯ್ದ ಭಾಗ.

**ಆರೆಸ್ಸೆಸ್ ಶತಮಾನೋತ್ಸವಕ್ಕೆ ಹತ್ತಿರವಾಗುತ್ತದೆ. ಯಾವುದೇ ಸಂಸ್ಥೆಗಾದರೂ ನೂರು ವರ್ಷಗಳ ಪ್ರಯಾಣವನ್ನು ಪೂರ್ಣಗೊಳಿಸುವುದು ಕಠಿಣವಾದ ಸವಾಲೇ ಸರಿ. ಹಲವರು ಮಾರ್ಗದಿಂದ ವಿಮುಖರಾಗಲು ಇಚ್ಛಿಸಿದರೆ ಇನ್ನು ಹಲವರು ಪ್ರಯಾಣವವನ್ನೇ ಕೊನೆಗೊಳಿಸುತ್ತಾರೆ. ಸಂಘ ಈ ಪ್ರಮುಖವಾದ ಮೈಲಿಗಲ್ಲನ್ನು ತಲುಪುತ್ತಿರುವ ಸಂದರ್ಭದಲ್ಲಿ, ಸಂಘ ಯಾವಾಗ ಅತಿದೊಡ್ಡ ಸವಾಲನ್ನು ಎದುರಿಸಿತು? ಆ ಸವಾಲು ಯಾವುದಾಗಿತ್ತು? ಎಂಬುದನ್ನು ತಿಳಿಸುತ್ತೀರಾ?**

ಸವಾಲು ಎಂಬುದು ಅತಿ ಹಿರಿದಾದಂತಹ ಪದ. ಹೌದು, ಈ ಪ್ರಯಾಣ ಕಷ್ಟಕರವಾಗಿತ್ತು, ಹಲವು ಏರಿಳಿತಗಳನ್ನು ಹೊಂದಿತ್ತು. ದಾರಿಯಲ್ಲಿ ಸಾಕಷ್ಟು ತಿರುವುಗಳಿದ್ದವು, ಅಡೆತಡೆಗಳಿದ್ದವು. ಆದರೆ ನಮ್ಮಲ್ಲಿ ಒಂದು ನಿರ್ದಿಷ್ಟವಾದ ಗುರಿಯಿತ್ತು, ಅದರೆಡೆಗೆ ಮಾತ್ರ ನಾವು ಗಮನ ಹರಿಸಬೇಕಿತ್ತು. ಆ ಗುರಿಯನ್ನೇ ನಾವು ನಿರಂತರ ಧ್ಯಾನಿಸಿದ್ದರಿಂದ ಎಂಥ ಅಗ್ನಿಪರೀಕ್ಷೆಗಳು ಎದುರಾದರೂ ನಮ್ಮ ಮೂಲಧ್ಯೇಯ ಮತ್ತು ಗುರಿಗಳಿಂದ ವಿಚಲಿತರಾಗಲಿಲ್ಲ. ಇದನ್ನು ಕಾಯ್ದುಕೊಂಡು ಹೋಗುವುದೇ ನಮ್ಮ ಮುಂದಿದ್ದ ಅತಿದೊಡ್ಡ ಸವಾಲಾಗಿತ್ತು.

ಇಂದಿನ ದಿನಗಳನ್ನು ನೋಡಿದರೆ, ನಮ್ಮ ಮೇಲಿನ ತಿರಸ್ಕಾರ ಮತ್ತು ವಿರೋಧದ ದಿನಗಳು ಮುಗಿದಿವೆ ಎನಿಸುತ್ತದೆ. ಇಂದು ನಾವು ಸಮಾಜದಿಂದ ಅಪರಿಮಿತ ಪ್ರೀತಿ ಮತ್ತು ವಾತ್ಸಲ್ಯವನ್ನು ಪಡೆಯುತ್ತಿದ್ದೇವೆ. ಕಾಲವೂ ಕೂಡ ನಮ್ಮ ಧ್ಯೇಯಕ್ಕೆ ಅನುಕೂಲಕರವಾಗಿದೆ. ಸಮಕಾಲೀನ ಜಾಗತಿಕ ಸನ್ನಿವೇಶಗಳು ಕೂಡ ಮಾನವೀಯತೆಯನ್ನ ಈ ದಿಕ್ಕಿನಲ್ಲೆ ಕೊಂಡೊಯ್ಯುತ್ತಿವೆ. ಜನ ನಮ್ಮಂತೆಯೇ ಆಲೋಚಿಸತೊಡಗಿದ್ದಾರೆ, ಕಾಲಾನಂತರದಲ್ಲಿ ಅವರ ಈ ಭಾವನೆ ಇನ್ನಷ್ಟು ಬಲಗೊಳ್ಳುತ್ತದೆ ಎಂಬ ನಂಬಿಕೆ ನನಗಿದೆ. ಈ ಕಾರಣದಿಂದ ನಮ್ಮ ದಾರಿ ಸ್ವಲ್ಪ ಸುಲಭವಾಗಿದೆ ಎಂದುಕೊಳ್ಳಬಹುದು, ಆದರೆ ಇದೂ ಒಂದು ಸವಾಲೇ!

ಈ ಹಿಂದೆ ನಮ್ಮ ದಾರಿಯಲ್ಲಿ ಎದುರಾದ ಮುಳ್ಳುಗಳು ಈಗ ತಮ್ಮ ಸ್ವರೂಪವನ್ನೇ ಬದಲಿಸಿಕೊಂಡಿವೆ. ಆಗ ಎದುರಾದ ವಿರೋಧ ಮತ್ತು ತಿರಸ್ಕಾರದ ಮುಳ್ಳುಗಳನ್ನು ನಾವು ಸಮರ್ಥವಾಗಿ ಎದುರಿಸಿದ್ದೇವೆ, ಕೆಲವನ್ನು ಅಲಕ್ಷಿಸಿದ್ದೇವೆ ಕೂಡ. ಆದರೆ ಹೊಸದಾಗಿ ಬಂದ ಸಂಗತಿಗಳು ನಮಗೆ ಸಂಪನ್ಮೂಲ, ಅನುಕೂಲ ಮತ್ತು ಸಮೃದ್ಧಿಗಳನ್ನು ತಂದಿವೆ. ಸಾಮಾಜಿಕವಾಗಿ ನಮ್ಮ ಗೌರವ ಹೆಚ್ಚಿಸಿದೆ, ಸಮಾಜ ನಮ್ಮಲ್ಲಿ ತನ್ನ ನಂಬಿಕೆಯನ್ನು ಮರುಸ್ಥಾಪಿಸಿದೆ, ನಮ್ಮ ಮೇಲಿನ ನಿರೀಕ್ಷೆಯನ್ನೂ ಹೆಚ್ಚಿಸಿಕೊಂಡಿದೆ. ನಾವು ಪರಿವರ್ತನೆಯನ್ನು ತರುತ್ತೇವೆ ಎಂಬ ಭರವಸೆಯೂ ಸಮಾಜಕ್ಕಿದೆ. ಈ ಪರಿಸ್ಥಿತಿಯಲ್ಲಿ ನಮ್ಮ ಜನಪ್ರಿಯತೆ ಮತ್ತು ಸಂಪನ್ಮೂಲಗಳೇ ನಮಗೆ ಮುಳುವಾಗಿದ್ದು ಅವನ್ನೂ ನಾವು ಧೈರ್ಯದಿಂದ ನಿಭಾಯಿಸಬೇಕಿದೆ. ಉದಾಹರಣೆಗೆ, ನಾವು ಅನೇಕ ವಿಷಯಗಳಲ್ಲಿ ಮಾಧ್ಯಮಗಳ ಮುಂದೆ ಹೋಗಲು ಇಚ್ಛಿಸದಿದ್ದರೂ, ಇನ್ನು ಮುಂದೆ ಅದನ್ನು ತಪ್ಪಿಸಲು ಸಾಧ್ಯವಿಲ್ಲ. ನಾವು ಮಾಧ್ಯಮಗಳ ಮುಂದೆ ಹೋಗದಿದ್ದರೆ ಅದೇ ನಮಗೆ ಪ್ರತಿಕೂಲವಾಗಬಹುದು. ನಾವು ಮರೆಯಲ್ಲೇಕೆ ಅಡಗಿ ಕುಳಿತಿದ್ದೇವೆ ಎಂದು ಕೆಲವರು ಆಶ್ಚರ್ಯ ಪಡಬಹುದು. ಹಾಗಾಗಿ ನಾವು ಮಾಧ್ಯಮವನ್ನು ಎದುರಿಸಲೇಬೇಕಿದೆ. ನಾವು ಹೊರಬಂದಾಗ ಪತ್ರಿಕೆಗಳು ನಮ್ಮ ಕುರಿತು ಬರೆಯುತ್ತವೆ. ಫೋಟೋಗಳನ್ನೂ ಮುದ್ರಿಸುತ್ತವೆ. ಆದರೆ ನಾವೆಂದೂ ಪ್ರಚಾರಕ್ಕಾಗಿ ಹಂಬಲಿಸಬಾರದು. ಇಂದು ನಾವು ಯಾವುದೇ ಸಂಪನ್ಮೂಲ, ಸಾಧನಗಳನನ್ನು ಹೊಂದಿದ್ದರೂ ಅವ್ಯಾವುದೂ ನಮ್ಮ ಅಗತ್ಯತೆಗಳಿಗಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ನಾವು ಅವುಗಳನ್ನು ನಿಯಂತ್ರಿಸಬೇಕೇ ಹೊರತು ಅವುಗಳು ನಮ್ಮನ್ನು ನಿಯಂತ್ರಿಸಬಾರದು. ನಾವು ಅವುಗಳ ದಾಸರಾಗಬಾರದು. ಕಷ್ಟಗಳನ್ನು ಎದುರಿಸುವ ನಮ್ಮ ಹಳೆಯ ಗುಣ ಎಂದಿಗೂ ನಾಶವಾಗಬಾರದು. ಸಮಯ ನಮ್ಮ ಪರವಾಗಿದ್ದರೂ ಅದು ನಮ್ಮ ಶೋಕಿ, ಆಡಂಬರಗಳಿಗೆ ಕಾರಣವಾಗಬಾರದು.

**ಇಂದಿನ ಯುವಕರು, ಅದರಲ್ಲೂ ವಿಶೇಷವಾಗಿ 18ರಿಂದ 24 ವರ್ಷ ವಯಸ್ಸಿನವರು ಕೆಲವು ಸಂಗತಿಗಳಲ್ಲಿ ಪದೇ ಪದೇ ಗೊಂದಲಕ್ಕೊಳಗಾಗುತ್ತಾರೆ. ಅವುಗಳನ್ನು ಭಾರತ ಮತ್ತು ಹಿಂದುತ್ವದ ದೃಷ್ಟಿಕೋನದಲ್ಲಿಯೇ ಅರ್ಥೈಸಿಕೊಳ್ಳಲು ಅವರು ಬಯಸುತ್ತಾರೆ. ಇದೇ ಸಮಯದಲ್ಲಿ, ಈ ವಿಷಯಗಳ ಬಗ್ಗೆ ನಡೆಯುವ ಚರ್ಚೆಗಳು ಅವರನ್ನು ಇನ್ನಷ್ಟು ಗೊಂದಲಕ್ಕೆ ಒಳಪಡಿಸುತ್ತವೆ. ಸಂಘಕ್ಕೆ ತನ್ನದೇ ಆದ ಕಾರ್ಯಶೈಲಿಯಿದೆ, ವಿಶಿಷ್ಟ ಚಿಂತನೆಯಿದೆ. ಯುವಕರನ್ನು ಕಾಡುತ್ತಿರುವ ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ನೀಡುವುದರೊಂದಿಗೆ, ಸಂಘದೊಂದಿಗೆ ಯುವಕರನ್ನು ಜೋಡಿಸುವ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ಹೇಗಿದೆ?**

ಯುವಜನತೆಯನ್ನು ಸಂಪರ್ಕಿಸಲು, ಅವರಿಗೆ ಸಂಘದ ಕುರಿತು ಒಲವು ಮೂಡಿಸಲು ಮತ್ತು ಸಂಘದೊಂದಿಗೆ ಅವರನ್ನು ಜೋಡಿಸಿಕೊಳ್ಳಲು ಹಲವು ದಾರಿಗಳಿವೆ. ಈ ಕಾರ್ಯಗಳನ್ನೆಲ್ಲ ಕೇಂದ್ರೀಕರಿಸಿ ಮಾಡುವುದಕ್ಕಿಂತ ಸ್ಥಳೀಯವಾಗಿಯೇ ಇನ್ನಷ್ಟು ಉತ್ತಮವಾಗಿ ನಿರ್ವಹಿಸಬಹುದು. ದೆಹಲಿ, ಮುಂಬೈ, ಚೆನ್ನೈಗಳಲ್ಲಿ ಈ ವಿಷಯದಲ್ಲಿ ಗೊಂದಲವಿದೆಯೇ? ಇದ್ದರೆ ಸ್ಥಳೀಯವಾಗಿಯೇ ಅದನ್ನು ಪರಿಹರಿಸಬೇಕು. ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಕಾರ್ಯತಂತ್ರವನ್ನು ರೂಪಿಸಿ ಪ್ರಯೋಗಗಳನ್ನು ನಡೆಸಲು ಸ್ಥಳೀಯ ಘಟಕಗಳಿಗೆ ನಾವು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತೇವೆ. ಉದಾಹರಣೆಗೆ, ಸ್ವಾತಂತ್ರ್ಯದ ಅಮೃತಮಹೋತ್ಸವದ ನಿಮಿತ್ತ ಇತ್ತೀಚೆಗೆ ನಾಗಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಥಳೀಯ ಸಣ್ಣಪುಟ್ಟ ಸಂಘಟನೆಗಳ ಜೊತೆ ನಾವು ಚರ್ಚೆಯನ್ನು ನಡೆಸಿದ್ದೇವೆ. ಅಂದಿನ ಕಾರ್ಯಕ್ರಮವು ನೃತ್ಯ–ನಾಟಕದೊಂದಿಗೆ ಆರಂಭವಾಯಿತು. ನಂತರ ಹಲವು ಯುವಜನಕೇಂದ್ರಿತ ಚಟುವಟಿಕೆಗಳು ನಡೆದವು. ಅಂತಿಮವಾಗಿ ಬೌದ್ಧಿಕ್‌ನೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಈ ದಿನಗಳಲ್ಲಿ ಹೊರಜಗತ್ತಿನಲ್ಲಿ ಯುವಜನತೆ ಹೇಗೆ ಬದುಕುತ್ತಿದ್ದಾರೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಹಾಗಾಗಿ ನಾವು ನಮ್ಮ ಮುಖ್ಯ ಉದ್ದೇಶ, ಕಾಳಜಿಗಳಿಗೆ ಧಕ್ಕೆಯಾಗದಂತೆ, ಈ ದಿನಗಳಲ್ಲಿ ಸಮಾಜಕ್ಕೆ ಅಗತ್ಯವಿರುವ ಕಾರ್ಯಗಳನ್ನು ಕೈಗೊಳ್ಳುತ್ತೇವೆ. ಇದರಿಂದಾಗಿ ಉತ್ಸಾಹಿ ತರುಣರು ಸಂಘದೊಂದಿಗೆ ಕೈಜೋಡಿಸುತ್ತಿದ್ದಾರೆ. ಪ್ರತಿವರ್ಷ ಸುಮಾರು ಎರಡು ಲಕ್ಷ ಯುವಕರು (ಆನ್ಲೈನ್ ವೆಬ್ಸೈಟ್ ಮೂಲಕ) ಆರೆಸ್ಸೆಸ್ ಸೇರುತ್ತಿದ್ದಾರೆ. ಈ ಯುವಕರಲ್ಲಿ ಬಹುತೇಕರು ವಿದ್ಯಾವಂತರು. ಸರಿಸುಮಾರು ಇದೇ ಸಂಖ್ಯೆಯ ಯುವಕರು ಸಂಘದ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಇದರರ್ಥ ಸಂಘದ ಬಗ್ಗೆ ಅನ್ಯಾನ್ಯ ಅಭಿಪ್ರಾಯಗಳು ವ್ಯಕ್ತವಾದರೂ ಯುವಜನತೆ ಸಂಘದತ್ತ ಆಕರ್ಷಿತರಾಗುತ್ತಲೇ ಇದ್ದಾರೆ.

**ಸಂಘದ ಕುರಿತು ಅತಿ ಹೆಚ್ಚು ಚರ್ಚೆಗೊಳಗಾಗುವ ಇನ್ನೊಂದು ಸಂಗತಿಯೆಂದರೆ ಅದು ಸಂಘ ಮತ್ತು ಮಹಿಳೆಯರ ಕುರಿತಾದದ್ದು. ಇತ್ತೀಚಿನ ವಿಜಯದಶಮಿ ಭಾಷಣದಲ್ಲಿ ಸಂತೋಷ್ ಯಾದವ್ ಅವರ ಭಾಷಣವನ್ನೇ ತೆಗೆದುಕೊಳ್ಳಬಹುದು, ಸಂಘದ ಕಾರ್ಯಗಳಲ್ಲಿ ಮಹಿಳೆಯರ ಸಹಭಾಗಿತ್ವದ ಕುರಿತು ಏನು ಹೇಳಲು ಇಚ್ಛಿಸುತ್ತೀರಿ? ಸಂಘದಲ್ಲಿ ಮಹಿಳೆಯರ ಸಹಭಾಗಿತ್ವ ಈ ದಿನಗಳಲ್ಲಿ ಹೆಚ್ಚಾಗುತ್ತಿದೆಯೇ?**

ಖಂಡಿತ ಹೆಚ್ಚಾಗುತ್ತಿದೆ. ಈ ಹಿಂದೆ ನಾವು ಪರಿವಾರ ಸಮ್ಮಿಲನಗಳನ್ನು ಹೊಂದಿರಲಿಲ್ಲ. ಆದರೆ ಇಂದು ನಾವು ಕುಟುಂಬ ಪ್ರಬೋಧನವನ್ನು ನಡೆಸುತ್ತಿದ್ದೇವೆ. ನಾವು ನಮ್ಮ ಕಾರ್ಯಕರ್ತರಿಗೆ ಅವರು ವರ್ಷಕ್ಕೊಮ್ಮೆಯಾದರೂ ಕುಟುಂಬದೊಂದಿಗೆ ವಿಹಾರಕ್ಕೆ ಹೋಗಬೇಕೆಂದು ಹೇಳುತ್ತಲೇ ಇರುತ್ತೇವೆ. ನಾವು ಈಗಾಗಲೇ ಘಟ ಪದ್ಧತಿ (ಒಬ್ಬ ವ್ಯಕ್ತಿ ನೇತೃತ್ವ ವಹಿಸಿದ ಸ್ವಯಂಸೇವಕರ ಗುಂಪು) ಯನ್ನು ಹೊಂದಿದ್ದೇವೆ. ಅಲ್ಲಿ ಸ್ವಯಂಸೇವಕರು ತಮ್ಮ ಗುಂಪಿನ ಸದಸ್ಯರ ಕುಟುಂಬದ ಜೊತೆ, ಕಟುಂಬದ ಹೆಣ್ಣುಮಕ್ಕಳೊಂದಿಗೆ ಆತ್ಮೀಯವಾದ ಒಡನಾಟ ಹೊಂದಿದ್ದಾರೆ. ಶಾಖೆಗೆ ನೇರವಾಗಿ ಹಾಜರಾಗಲಾರದವರನ್ನೂ ಸಂಘದೊಡನೆ ಜೋಡಿಸಲು ಮತ್ತು ಸಂಘವನ್ನು ಮನೆಯವರೆಗೂ ತಲುಪಿಸಲು ಇದೊಂದು ಉತ್ತಮ ಮಧ್ಯಮವಾಗಿದೆ.




**ಜನಸಂಖ್ಯಾ ಅಸಮತೋಲನ ಒಂದು ಪ್ರಾಯೋಗಿಕ ಸಮಸ್ಯೆಯಾಗಿದೆ. ಎಲ್ಲೆಲ್ಲಿ ಅಸಮತೋಲನ ನಡೆದಿದೆಯೋ ಅಲ್ಲೆಲ್ಲ ನಮ್ಮ ದೇಶ ಇಬ್ಭಾಗವಾಗಿದೆ. ಇದೊಂದು ಜಾಗತಿಕ ಸಮಸ್ಯೆ. ಜನರ ಮತ್ತು ನಾಗರಿಕತೆಗಳ ಆಕ್ರಮಣಕಾರಿ ಸ್ವಭಾವದಿಂದ ಇದು ಸಂಭವಿಸಿದೆ. ಆದರೆ ಇವುಗಳಿಗೆ ವಿಭಿನ್ನವಾಗಿ ಹಿಂದು ಸಮಾಜ ಮಾತ್ರ ಯಾವುದೇ ರೀತಿಯ ಆಕ್ರಮಣಶೀಲತೆಯನ್ನು ಹೊಂದದೆ ಆದರ್ಶಪ್ರಾಯವಾಗಿ ನಡೆದುಬಂದಿದೆ. ಶಾಂತಿ, ಅಹಿಂಸೆ, ಪ್ರಜಾಪ್ರಭುತ್ವ, ಜಾತ್ಯತೀತತೆ ಇತ್ಯಾದಿಗಳ ಹಿತದೃಷ್ಟಿಯಿಂದ ಆಕ್ರಮಣಶೀಲತೆಯನ್ನು ಹೊಂದಿರದ ಜನರ ಸಂರಕ್ಷಣೆ ಅತ್ಯಗತ್ಯ. ಸುಡಾನ್, ಪಾಕಿಸ್ಥಾನಗಳ ದುರಂತ ಪರಿಸ್ಥಿತಿಗಳನ್ನು ಈಗಾಗಲೇ ನಾವು ನೋಡಿದ್ದೇವೆ. ಈ ವಿಷಯದಲ್ಲಿ ಎಲ್ಲರೂ ರಾಜಕೀಯ ಮತ್ತು ಓಲೈಕೆಯ ಮನೋವೃತ್ತಿಯನ್ನು ತ್ಯಜಿಸಲೇಬೇಕು. ಹಿಂದುಗಳಿಗೆ ಅಥವಾ ಇತರ ಯಾವುದೇ ಸಮುದಾಯಕ್ಕೆ ಪಕ್ಷಪಾತ ತೋರದೆ ಸಂಪೂರ್ಣ ವಸ್ತುನಿಷ್ಠವಾಗಿ ನಾವೊಂದು ಪ್ರಶ್ನೆಯನ್ನು ಕೇಳಬೇಕು; ಅದೇನೆಂದರೆ, ಪಾಕಿಸ್ಥಾನದ ಸೃಷ್ಟಿಗೆ ಕಾರಣವಾದರೂ ಏನು?**

ಇತಿಹಾಸದ ಆರಂಭಕಾಲದಿಂದಲೂ ಭಾರತ ಅಖಂಡವಾಗಿದೆ, ಅವಿಭಜಿತವಾಗಿದೆ. ಇಸ್ಲಾಮಿನ ವಿನಾಶಕಾರಿ ಆಕ್ರಮಣ ಶತಮಾನಗಳ ನಂತರ ಕೊನೆಯಾಯಿತು. ಆದರೆ ನಂತರದಲ್ಲಿ ಭಾರತ ಹಠಾತ್ತನೇ ವಿಭಜನೆ ಹೇಗಾಯಿತು? ಇದಕ್ಕೆ ನಾನು ಒಂದೇ ಒಂದು ಕಾರಣವನ್ನು ನೀಡುತ್ತೇನೆ – ಯಾವಾಗೆಲ್ಲಾ ಹಿಂದುಗಳು 'ಸ್ವ'ತ್ವವನ್ನು ಮರೆತಿದ್ದಾರೋ ಆಗೆಲ್ಲಾ ಮಹಾ ಮಹಾ ವಿಪತ್ತುಗಳು ಎದುರಾಗಿವೆ. ಸೋದರರು ಒಡೆದು ಪಾಲಾಗಿದ್ದಾರೆ. ಹಿಂದುಗಳು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದಾರೆ ಮತ್ತು ಹಿಂದುಗಳ ಧಾರ್ಮಿಕ ಕೇಂದ್ರಗಳೆಲ್ಲ ನಾಶವಾಗಿವೆ.

ನಾವು ಯಾರ ವಿರುದ್ಧವೂ ಮಾತಾಡುತ್ತಿಲ್ಲ. ಆದರೆ ಸತ್ಯವೆಂದರೆ ಭಾರತವು ಈ ಪ್ರಮಾಣದ ಹತ್ಯಾಕಾಂಡವನ್ನು ಎಂದಿಗೂ ನೋಡಿರಲಿಲ್ಲ. ನಾವು ಕಳಿಂಗ ಯುದ್ಧದ ಬಗ್ಗೆ ಯೋಚಿಸಿದರೆ, ಇದು ಸ್ಥಳೀಯವಾಗಿ ನಡೆದ ಯುದ್ಧವಾಗಿತ್ತು ಮತ್ತು ಅತಿ ಶೀಘ್ರದಲ್ಲೇ ನಿಂತುಹೋಯಿತು. ನಾವು 'ಹಿಂದು ಭಾವ'ವನ್ನು ಮರೆತಿದ್ದರಿಂದ ಇದನ್ನೆಲ್ಲ ಎದುರಿಸಬೇಕಾಯಿತು. ನಾವು ಹಿಂದು ಭಾವದ ಬಗ್ಗೆ ಮಾತನಾಡುತ್ತೇವೆಂದರೆ, ನಾವು ಇಸ್ಲಾಮಿಕ್ ಪೂಜಾ ವಿಧಾನಕ್ಕೆ ವಿರುದ್ಧವಾಗಿದ್ದೇವೆಂದಲ್ಲ.


*4ನೇ ಪುಟಕ್ಕೆ...*

## ಸಂಸ್ಮರಣೆ

# ಸುಬ್ರಹ್ಮಣ್ಯ ಭಾರತಿ (ಡಿಸೆಂಬರ್ 11, 1882 – ಸೆಪ್ಟೆಂಬರ್ 11, 1921)



**"ನೀನೇ ಸ್ವಯಂಜ್ಯೋತಿಯಮ್ಮ
ಶೌರ್ಯ ಸ್ವರೂಪಿಣಿ ನೀನಮ್ಮ
ದುಃಖ, ಕಪಟಗಳ ಸಂಹಾರಕಿ ನೀನಮ್ಮ
ನಿನ್ನನುಕಂಪೆಯ ಪ್ರಾರ್ಥಿನಾನಮ್ಮ".**

ತಾಯಿ ಭಾರತಿಯನ್ನೇ ಹೃದಯದಲ್ಲಿ ಆರಾಧ್ಯಳಾಗಿಸಿ ಅವಳನ್ನು ಭಕ್ತಿಭಾವದಿಂದ ಭಜಿಸುವ ಈ ಮೇಲಿನ ಕವಿತೆ, ನಮ್ಮ ದೇಶದ ಮಹಾನ್ ಸಾಹಿತಿಗಳಲ್ಲೊಬ್ಬರಾದ ಮಹಾಕವಿ ಶ್ರೀ ಸುಬ್ರಹ್ಮಣ್ಯ ಭಾರತಿಯವರ ತಮಿಳು ಕವಿತೆಯ ಅನುವಾದ.

ಸ್ವಾತಂತ್ರ ಸಂಗ್ರಾಮದಲ್ಲಿ ಜನರಲ್ಲಿ ಅದರಲ್ಲೂ ತಮಿಳು ಭಾಷಿಕರಲ್ಲಿ ದೇಶಭಕ್ತಿಯ ಕೆಚ್ಚನ್ನು ತುಂಬುತ್ತ ಮಾತೃಭೂಮಿಯ ಕರ್ತವ್ಯಕ್ಕೆ ಸಜ್ಜುಗೊಳಿಸುತ್ತಿದ್ದ ಅವರ ಕೃತಿಗಳು ಭಾರತದ ಬಹುತಾಂಶ ಭಾಷೆಗಳಿಗೆ ಅನುವಾದಗೊಂಡಿವೆ.

ಈ ಮಹಾಕವಿ 1882ರಲ್ಲಿ ಡಿಸೆಂಬರ್ 11 ರಂದು ತಮಿಳುನಾಡಿನ ಎಟ್ಟಯಾಪುರಂ ಗ್ರಾಮದಲ್ಲಿ ಚಿನ್ನಸಾಮಿ ಸುಬ್ರಮಣ್ಯ ಐಯ್ಯರ್ ಹಾಗೂ ಎಲಕ್ಕುಮಿ(ಲಕ್ಷ್ಮಿ)ಅಮ್ಮಾಳ್ ದಂಪತಿಗಳ ಪುತ್ರ "ಸುಬ್ಬಯ್ಯ"ನಾಗಿ ಜನಿಸಿದರು. ತಿರುನಲ್ವೇಲಿಯಲ್ಲಿ ಆರಂಭಿಕ ಶಿಕ್ಷಣ ಪ್ರಾರಂಭಿಸಿದರು. ಬಾಲ್ಯದಿಂದಲೇ ಅತ್ಯಂತ ಪ್ರತಿಭಾಶಾಲಿ ಕವಿಯಾಗಿದ್ದ ಸುಬ್ಬಯ್ಯ ತಮ್ಮ 11ನೇ ವಯಸ್ಸಿನಲ್ಲೆ ಎಟ್ಟಯಾಪುರಂನ ಆಸ್ಥಾನ ಕವಿಗಳು ಹಾಗೂ ಸಂಗೀತಗಾರರ ಸಮ್ಮೇಳನಕ್ಕೆ ಆಹ್ವಾನಿತರಾಗಿದ್ದರು.ಅವರ ಕವಿತ್ವಕ್ಕೆ ಮಾರುಹೋದ ಆಸ್ಥಾನ ಅವರನ್ನು "ಭಾರತಿ" (ಸರಸ್ವತಿಯ ಅನುಗ್ರಹಿತ)ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿತು.

ಕಾಶಿಯಲ್ಲಿ ತಮ್ಮ ಶಿಕ್ಷಣದ ವೇಳೆಯಲ್ಲೇ ಭಾರತಿಯವರು ಭಾರತೀಯ ಆಧ್ಯಾತ್ಮಿಕತೆ ಹಾಗು ಸ್ವಾತಂತ್ರ ಹೋರಾಟಗಳ ತೀವ್ರ ಸೆಳೆತಕ್ಕೆ ಒಳಗಾದರು. ಇದು ಅವರ ದೃಷ್ಟಿಕೋನವನ್ನು ವಿಸ್ತಾರಗೊಳಿಸಿತು. ಜೊತೆಗೆ ಅವರು ಸಂಸ್ಕೃತ, ಹಿಂದಿ ಹಾಗು ಆಂಗ್ಲ ಭಾಷೆಗಳನ್ನು ಕರಗತಮಾಡಿಕೊಂಡರು. ಡಿಸೆಂಬರ್ 1905ರಲ್ಲಿ, ಬನಾರಸ್ ನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತಿ ಪಾಲ್ಗೊಂಡರು. ಅಧಿವೇಶನದಿಂದ ಮರಳುವಾಗ ಸೋದರಿ ನಿವೇದಿತಾರನ್ನು ಸಂಧಿಸಿದರು.ಈ ಭೇಟಿ ಅವರ ಜೀವನದ ಮೇಲೆ ಗಾಢ ಪ್ರಭಾವ ಬೀರಿದ್ದಲ್ಲದೇ "ತತ್ಕಾಲೀನ ಭಾರತದ ಸಮಸ್ಯೆಗಳಿಗೆ ಭಾರತೀಯ ದೃಷ್ಟಿಕೋನಗಳಡಿಯಲ್ಲೇ ಸಮಾಧಾನಗಳನ್ನು ಹುಡುಕಬೇಕು" ಎಂದು ಮನದಟ್ಟುಮಾಡಿಸಿತು.

ಮಹಿಳೆಯರ ಹಕ್ಕುಗಳ, ಅವರ ಹಿತಾಸಕ್ತಿಯ ರಕ್ಷಣೆಯನ್ನು ಗುರುತಿಸುವೆಡೆಗಿನ ಅವರ ಪ್ರತಿಭಟನೆ ಮಹಿಳಾವರ್ಗದ ಆಶಾಕಿರಣವೆನಿಸಿತು. ಮಹಿಳಾ ಸ್ವಾತಂತ್ರ್ಯ ಬಗ್ಗೆ ಭಾರತಿಯವರ ಮನಸ್ಸಿನಲ್ಲಿ ತೀವ್ರ ಕಳವಳ ಉಂಟಾಯಿತು. ಅವರು 'ನವ ನಾರಿಯು' ಶಕ್ತಿಯ ಮೂಲವೆಂದು ಭಾವಿಸುತ್ತಾರೆ, ಪುರುಷನ ಮನಃಪೂರ್ವಕ ಸಂಗಾತಿಯಾದ ಈಕೆಯೊಂದಿಗೆ ಸಹಪ್ರಯತ್ನದ ಮೂಲಕ ಒಂದು ಹೊಸ ಪ್ರಪಂಚವನ್ನೇ ನಿರ್ಮಿಸಬಹುದು ಎಂದ ಅವರ ಅಭಿಪ್ರಾಯವಾಗಿದೆ.

ಈ ಅವಧಿಯಲ್ಲಿ, ಬಾಹ್ಯ ಜಗತ್ತಿನ ಬಗ್ಗೆ ಸರಿಯಾದ ಮಾಹಿತಿಯ ಅವಶ್ಯಕತೆಯಿದೆಯೆಂದು ಗ್ರಹಿಸಿದ ಭಾರತಿಯವರು, ಪಶ್ಚಿಮದ ಪತ್ರಿಕೋದ್ಯಮ ಜಗತ್ತು ಹಾಗು ಮುದ್ರಣ ಮಾಧ್ಯಮದಲ್ಲಿ ಆಸಕ್ತರಾದರು. ಸಶಸ್ತ್ರ ಕ್ರಾಂತಿ ಹಾಗೂ ಅಹಿಂಸಾತ್ಮಕ ಹೋರಾಟಗಳ ಕವಲುಗಳ ಮಧ್ಯೆ ಜನರನ್ನು ಸ್ವಾತಂತ್ರ್ಯಾಂದೋಲನದಲ್ಲಿ ಜಾಗೃತಗೊಳಿಸಲು ಸಾಹಿತ್ಯದ ಮಹತ್ವವನ್ನು ಭಾರತಿ ಮನಗಂಡರು. ಈ ಉದ್ದೇಶ ಸಾಧನೆಗಾಗಿ 1904ರಲ್ಲಿ ತಮಿಳು ದಿನಪತ್ರಿಕೆ 'ಸ್ವದೇಶಮಿತ್ರನ್'ನಲ್ಲಿ ಸಹಾಯಕ ಸಂಪಾದಕರಾಗಿ ಕಾರ್ಯಾರಂಭಿಸಿದರು. ಏಪ್ರಿಲ್ 1907ರಲ್ಲಿ ತಮಿಳು ವಾರಪತ್ರಿಕೆ ಇಂಡಿಯಾ ಹಾಗು ಆಂಗ್ಲ ದಿನಪತ್ರಿಕೆ 'ಬಾಲಭಾರತಂ'ನ ಸಹಸಂಪಾದಕತ್ವದಲ್ಲಿ ರಾಷ್ಟ್ರೀಯವಿಚಾರಗಳನ್ನು ಪ್ರಕಟಿಸತೊಡಗಿದರು. ಈ ಪತ್ರಿಕೆಗಳಲ್ಲಿನ ಕವಿತೆಗಳು, ಲೇಖನಗಳು ಜನರಲ್ಲಿ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿದ್ದು ಮಾತ್ರವಲ್ಲ ಬ್ರಿಟಿಷರ ವಿರುದ್ಧ ಜನಜಾಗೃತಿಯಲ್ಲಿ ಮಹತ್ವದ ಪಾತ್ರ ವಹಿಸಿದವು.

1908ರಲ್ಲಿ ಮದರಾಸಿನಲ್ಲಿ ಸ್ವರಾಜ್ ದಿನಾಚರಣೆಗೆ ಸಾರ್ವಜನಿಕ ಸಭೆಯನ್ನು ಅವರೇ ಆಯೋಜಿಸಿದ್ದರು. ಅಲ್ಲಿ ಭಾರತಿಯವರ ವಂದೇ ಮಾತರಂ ಹಾಗು ಜಯ ಭಾರತ್ ಎಂಬ ರಾಷ್ಟ್ರೀಯತೆಯಿಂದ ಓತಪ್ರೋತವಾಗಿದ್ದ ಕವಿತೆಗಳನ್ನು ಮುದ್ರಿಸಿ ಪ್ರೇಕ್ಷಕರಿಗೆ ಉಚಿತವಾಗಿ ವಿತರಣೆ ಮಾಡಿದರು. ಈ ಘಟನೆ ಬ್ರಿಟಿಷರ ಕಣ್ಣಿಗೆ ದೇಶದ್ರೋಹವಾಗಿ ಕಂಡಿತು. ದಿನಗಳೆದಂತೆ ಅರವಿಂದರ ಮತ್ತು ಲೋಕಮಾನ್ಯ ತಿಲಕರಿಗೆ ಹತ್ತಿರವಾಗುತ್ತಿದ್ದ ಭಾರತಿಯವರಿಂದ ತಮಗೆ ತೊಂದರೆ ತಪ್ಪಿದ್ದಲ್ಲ ಎಂದು ಮನಗಂಡ ಬ್ರಿಟಿಷ್ ಸರ್ಕಾರ ಅವರ ಬಂಧನಕ್ಕೆ ಹೊಂಚುಹಾಕತೊಡಗಿತ್ತು. ಭಾರತಿಯವರು ಕೆಲಸಮಾಡುತ್ತಿದ್ದ, ಇಂಡಿಯಾ ನಿಯತಕಾಲಿಕದ ಮಾಲೀಕರನ್ನು ಮದರಾಸಿನಲ್ಲಿ ಬಂಧಿಸಲಾಯಿತು. ತಮ್ಮ ಬಂಧನದ ಸುಳಿವುಸಿಕ್ಕಕೂಡಲೇ ಭಾರತಿ ಫ್ರೆಂಚ್ ಆಳ್ವಿಕೆಯಲ್ಲಿದ್ದ ಪಾಂಡಿಚೇರಿಗೆ ಪಾರಾದರು. ಮುಂದಿನ 10 ವರ್ಷಗಳ ಕಾಲ ಅಲ್ಲಿಂದಲೇ ಅಪಾರ ಕಷ್ಟಗಳ ನಡುವೆಯೂ ತಮ್ಮ ಪತ್ರಿಕೆಗಳನ್ನು ಮುದ್ರಿಸಿ ಜನಜಾಗೃತಿಗೆ ತೊಡಗಿದ್ದರಲ್ಲದೆ ಬ್ರಿಟಿಷರಿಗೆ ಬಿಸಿಮುಟ್ಟಿಸಲಾರಂಭಿಸಿದರು.

ಪಾಂಡಿಚೇರಿಯಲ್ಲೇ ವಾಸವಾಗಿದ್ದ ಮಹರ್ಷಿ ಅರವಿಂದರು ಭಾರತಿಯವರ ಸಂಪರ್ಕದಲ್ಲಿದ್ದರು. ಭಾರತಿಯವರಲ್ಲಿ ವೇದಗಳ ಮತ್ತು ಭಾರತೀಯ ಆಧ್ಯಾತ್ಮಿಕ ಸಾಹಿತ್ಯದ ಕುರಿತಾಗಿ ವಿಶೇಷ ಆಸ್ಥೆ ಬೆಳೆಯುವಂತೆ ಮಾಡಿ ಅವುಗಳ ಕುರಿತಾಗಿ ತಮಿಳಿನಲ್ಲಿ ಬರೆಯುವಂತೆ ಪ್ರೋತ್ಸಾಹಿಸಿದ್ದು ಇದೇ ಕಾಲಘಟ್ಟದಲ್ಲಿ. ಇಬ್ಬರು ಶ್ರೇಷ್ಠ ಸಾಹಿತಿಗಳು ಪರಸ್ಪರರ ವಿಚಾರವಿನಿಮಯವೇ ಭಾರತಿಯವರು ಪ್ರಗಾಢ ಸಾಹಿತ್ಯರಚಿಸಲು ಉರುವಲಾಯಿತು.

ಭಾರತಿಯವರ ಲೇಖನಗಳನ್ನು ನಿಗ್ರಹಿಸುವ ದೃಷ್ಟಿಯಿಂದ ಬ್ರಿಟಿಷರು ಅವರಿಗೆ ಯಾವುದೇ ಬಗೆಯಿಂದ ಹಣವನ್ನು ರವಾನಿಸುವುದನ್ನು ನಿಲ್ಲಿಸುವುದರ ಜೊತೆಗೆ ಪತ್ರಿಕೆಗಳಿಗೆ ಪತ್ರಗಳು ತಲುಪದಂತೆ ಮಾಡಿದರು. ಇಂಡಿಯಾ ಹಾಗು ವಿಜಯಾ ಎರಡೂ ಪತ್ರಿಕೆಗಳನ್ನು 1909ರಲ್ಲಿ ಪಾಂಡಿಚೇರಿಯ ಆಚೆ ಬ್ರಿಟಿಷ್ ಭಾರತದಲ್ಲಿ ಬಹಿಷ್ಕರಿಸಲಾಗಿತ್ತು.


ಭಾರತಿ, ಜಾತಿ ವ್ಯವಸ್ಥೆಯ ಕೆಟ್ಟ ನಡವಳಿಕೆಗಳ ವಿರುದ್ಧವೂ ಹೋರಾಟ ನಡೆಸಿದರು. ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರೂ ಸ್ವತಃ ತಮ್ಮ ಜಾತಿ ಸ್ವರೂಪವನ್ನು ತ್ಯಜಿಸಿದ್ದರು. ಅವರು ಎಲ್ಲ ಜೀವಿಗಳನ್ನು ಸಮಾನವೆಂದು ಪರಿಗಣಿಸುತ್ತಿದ್ದರು. ಇದನ್ನು ಸಾಧಿಸಿತೋರಿಸಲು ಒಬ್ಬ ಅಸ್ಪ್ರಶ್ಯ ಜಾತಿಯವನೆನಿಸಿದ್ದ ಬಾಲಕನಿಗೆ ಉಪನಯನವನ್ನು ಮಾಡಿದರು.

ಭಾರತಿಯವರ ಆರೋಗ್ಯವು ಬಂಧನಗಳಿಂದ ತೀವ್ರವಾಗಿ ಹದಗೆಟ್ಟಿತು.1920ರ ಹೊತ್ತಿಗೆ ಅವರ ಚಳವಳಿಗಳ ಮೇಲೆ ಸಾಮಾನ್ಯ ಕ್ಷಮಾದಾನ ಆದೇಶವನ್ನು ಅಂತಿಮವಾಗಿ ತೆಗೆದುಹಾಕುವಷ್ಟರಲ್ಲೇ ಜೀವನ್ಮರಣದ ನಡುವೆ ಹೋರಾಟ ನಡೆಸಿದ್ದರು. ತಾವೇ ನಿಯಮಿತವಾಗಿ ಆಹಾರವನ್ನು ನೀಡುತ್ತಿದ್ದ ಚೆನ್ನೈನ ಟ್ರಿಪ್ಲಿಕೇನಲ್ಲಿರುವ ಪಾರ್ಥಸಾರಥಿ ದೇವಾಲಯದಲ್ಲಿದ್ದ ಆನೆಯಿಂದ ತುಳಿತಕ್ಕೊಳಪಟ್ಟಿದ್ದರು.ಈ ಘಟನೆಯಲ್ಲಿ ಅವರು ಜೀವಂತ ಪಾರಾದರೂ ಸಹ ಕೆಲವು ತಿಂಗಳ ನಂತರ ಅವರ ಆರೋಗ್ಯವು ಕ್ಷೀಣಿಸಿ ಸೆಪ್ಟೆಂಬರ್ 11, 1921ರಲ್ಲಿ ಇಹಲೋಕ ತಜಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು 2020 ತಮ್ಮ ಭಾಷಣವೊಂದರಲ್ಲಿ ಸುಬ್ರಮಣ್ಯ ಭಾರತಿಯವರನ್ನು ಈ ರೀತಿಯಾಗಿ ಸ್ಮರಿಸಿದ್ದಾರೆ:

ಭಾರತೀಯಾರ್ ಅವರು ಪ್ರಾಚೀನತೆ ಮತ್ತು ಆಧುನಿಕತೆಯ ಆರೋಗ್ಯಪೂರ್ಣ ಮಿಶ್ರಣದಲ್ಲಿ ನಂಬಿಕೆ ಇಟ್ಟವರಾಗಿದ್ದರು. ಅವರು ನಮ್ಮ ಬೇರುಗಳ ಜೊತೆ ಸಂಪರ್ಕ ಉಳಿಸಿಕೊಂಡು, ಜೊತೆಗೆ ಭವಿಷ್ಯದತ್ತ ಕಣ್ಣು ನೆಟ್ಟುಕೊಂಡು ಜ್ಞಾನವನ್ನರಸುವವರಾಗಿದ್ದರು, ಅವರು ತಮಿಳು ಭಾಷೆ ಮತ್ತು ಭಾರತ ಮಾತೆಯನ್ನು ತಮ್ಮ ಎರಡು ಕಣ್ಣುಗಳೆಂಬಂತೆ ಪರಿಗಣಿಸಿದ್ದರು. ಅವರು ಪ್ರಾಚೀನ ಭಾರತದ ಶ್ರೇಷ್ಠತೆಯನ್ನು, ವೇದಗಳ ಮತ್ತು ಉಪನಿಷತ್‌ಗಳ ಶ್ರೇಷ್ಠತೆಯನ್ನು, ಸಾರುವ ಗೀತೆಗಳನ್ನು ಹಾಡಿದ್ದರು. ನಮ್ಮ ಸಂಸ್ಕೃತಿ, ಪರಂಪರೆ, ಮತ್ತು ನಮ್ಮ ಹಿಂದಿನ ಕಾಲದ ವೈಭವದ ಕುರಿತೂ ಅವರ ಹಾಡುಗಳಿದ್ದವು. ಆದರೆ ಅವರು ಹಿಂದಿನ ವೈಭವದ ರಮಾರಮಣೀಯತೆಯಲ್ಲಿ ಬದುಕಿದರೆ ಸಾಲದು ಎಂಬ ಎಚ್ಚರಿಕೆಯನ್ನೂ ನಮಗೆ ನೀಡಿದ್ದರು. ಪ್ರಗತಿಯತ್ತ ಮುನ್ನಡೆಯಲು ವೈಜ್ಞಾನಿಕ ಮನೋಭಾವ, ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳುವುದು ಅಗತ್ಯ ಎಂದೂ ಅವರು ಹೇಳಿದ್ದರು.

---




ಪುಸ್ತಕ ಪರಿಚಯ

### ಸಮಗ್ರ ಲೇಖನಗಳ ಮಹಾಸಂಪುಟ
## ದೇವುಡು ಲೋಕಕಥನ

**ಪುಟಗಳ ಸಂಖ್ಯೆ: 500**
**ಸಂಪಾದಕರು:**
**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಹಿರಿಯ ಸಾಹಿತಿ ದೇವುಡು ಅವರ ಸಮಗ್ರ ಲೇಖನಗಳ ಮಹಾಸಂಪುಟ– ದೇವುಡು ಲೋಕಕಥನ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಕೃತಿಯ ಸಂಪಾದಕರು. ದೇವುಡು ಎಂದೇ ಖ್ಯಾತಿಯ ದೇವುಡು ನರಸಿಂಹಶಾಸ್ತ್ರಿ ಅವರು ಐತಿಹಾಸಿಕ ಪೌರಾಣಿಕ ಹಾಗೂ ಸಾಮಾಜಿಕ ಕಾದಂಬರಿಗಳು, ಕಥೆಗಳು, ಮಕ್ಕಳ ಕೃತಿಗಳು, ನಾಟಕಗಳು, ಪ್ರಾಚೀನ ಕಾವ್ಯಗಳ ಸಂಗ್ರಹ, ಅನುವಾದ ಕೃತಿಗಳು ಹೀಗೆ ವೈವಿಧ್ಯಮಯ ವಲಯಗಳಲ್ಲಿ ಬರೆದಿದ್ದು, ಅವರ ಮಹಾಕ್ಷತ್ರೀಯ ಕಾದಂಬರಿಗೆ ಕೇಂದ್ರ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

"ಎದ್ದ ಬಿದ್ದ ಒದ್ದಾಡಿದ । ಗುದ್ದಾಡಿದ ದೇವುಡು
ಸುತ್ತಾಡಿದ, ಲೆತ್ತಾಡಿದ । ಕಿತ್ತಾಡಿದ ದೇವುಡು
ಕುಂಟುಗಾಲಿನಿಂದ ಹೊರಟ । ವೈಕುಂಠಕೆ ದೇವುಡು
ಕುರುಡುಗಣ್ಣಿನಿಂದ ಕಂಡ । ಕೈಲಾಸವ ದೇವುಡು"

ದೇವುಡು ಅವರನ್ನು ಕುರಿತು ವರಕವಿ ಬೇಂದ್ರೆಯವರು ಬರೆದ ಪದ್ಯದ ಕೆಲವು ಸಾಲುಗಳಿವು.

ಕೈಲಾಸವ ಕಂಡ ದೇವುಡು, ವೈಕುಂಠಕೆ ಹೊರಟ ದೇವುಡು ನಮಗಾಗಿ ವೇದ, ಉಪನಿಷತ್ತುಗಳು, ವೇದಾಂತ ವಿಚಾರ, ಗೀತಾ ಸಂದೇಶ, ಶಾಂಕರ ಸಿದ್ಧಾಂತ, ಸ್ವಾತಂತ್ರ್ಯ ದರ್ಶನ, ರಾಮಾಯಣದ ರಾಮ, ಹನುಮಂತನ ಪಾತ್ರ, ಕಾಳಿದಾಸನ ವೇದಾಂತ, ನಾಟಕ ಮತ್ತು ಕಲೆ, ಸಂಸ್ಕೃತ ನಾಟಕಗಳು, – ಹೀಗೆ ಹಲವು ವಿಷಯಗಳನ್ನು ಕುರಿತು ಒಂದಿಷ್ಟು ಮನನಾರ್ಹ ಅಂಶಗಳನ್ನು ಬರೆದಿಟ್ಟಿದ್ದಾರೆ! ಇವುಗಳಲ್ಲದೆ, ಭಾಷೆ–ಸಂಸ್ಕೃತಿ ಸಂಬಂಧಿತ ಹಲವು ಲೇಖನಗಳೂ ಇವೆ. ಇಂತಹ ಮಹನೀಯರ ಲೇಖನಗಳನ್ನು ಸಂಪಾದಿಸಿದ್ದ ಹೆಚ್ಚುಗಾರಿಕೆ ಈ ಕೃತಿಯದ್ದು.

**ದೇವುಡು ಲೋಕಕಥನ ಪುಸ್ತಕವನ್ನು ಖರೀದಿಸಲು : 7483681708**

---

ಭಾರತದಲ್ಲಿನ ಒಟ್ಟಾರೆ ಎಥೆನಾಲ್ ಉತ್ಪಾದನಾ ಸಾಮರ್ಥ್ಯವು ಈ ವರ್ಷದ ಅಂತ್ಯದ ವೇಳೆಗೆ ಶೇಕಡಾ 25 ರಷ್ಟು ಅಂದರೆ 1,250 ಕೋಟಿ ಲೀಟರ್‌ಗೆ ಏರುವ ನಿರೀಕ್ಷೆಯಿದೆ ಎಂದು ಸರ್ಕಾರ ಹೇಳಿದೆ. ಯೋಜನೆಗಳ ತ್ವರಿತ ಅನುಮತಿಗಾಗಿ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇಂದಿನವರೆಗೆ, ಎಥೆನಾಲ್ ಯೋಜನೆಗಳಿಗೆ ಬ್ಯಾಂಕ್‌ಗಳಿಂದ 20,000 ಕೋಟಿ ರೂ.ಗೂ ಹೆಚ್ಚು ಸಾಲ ಮಂಜೂರಾಗಿದ್ದು, ಅದರಲ್ಲಿ ಈಗಾಗಲೇ 10,000 ಕೋಟಿ ರೂ. ಗಳನ್ನು ಬಡ್ಡಿ ರಿಯಾಯಿತಿ ಯೋಜನೆಯಡಿ ನೀಡಲಾಗಿದೆ. ಎಥೆನಾಲ್ ಮಿಶ್ರಣವು ಈ ವರ್ಷ ಶೇಕಡಾ 12 ತಲುಪುತ್ತದೆ ಮತ್ತು 2025ರ ವೇಳೆಗೆ ಶೇಕಡಾ 25ರ ಗುರಿಯನ್ನು ತಲುಪುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



---


प्रधानमंत्री भारतीय जन औषधि परियोजना

ದೇಶದ ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 651 ಜಿಲ್ಲೆಗಳಲ್ಲಿ ಹೊಸ ಜನೌಷಧಿ ಕೇಂದ್ರಗಳನ್ನು ತೆರೆಯಲು ಫಾರ್ಮಾಸಿಸ್ಟ್‌ಗಳಿಂದ ಸರ್ಕಾರ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು ಅರ್ಜಿ ಸಲ್ಲಿಸಿ ಅವಕಾಶ ಪಡೆದುಕೊಳ್ಳಬಹುದಾಗಿದೆ. ಗುಣಮಟ್ಟದ ಜೆನೆರಿಕ್ ಔಷಧಿಗಳನ್ನು ಎಲ್ಲರಿಗೂ ಕೈಗೆಟಕುವ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ, ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆಯನ್ನು ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವಾಲಯದ ಫಾರ್ಮಾಸ್ಯುಟಿಕಲ್ಸ್ ಇಲಾಖೆಯು ಪ್ರಾರಂಭಿಸಿದೆ. ಮಾರ್ಚ್ 2024ರ ವೇಳೆಗೆ ಜನೌಷಧಿ ಕೇಂದ್ರಗಳ ಸಂಖ್ಯೆಯನ್ನು 10,000ಕ್ಕೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ.

**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ, ಅರುಣ್ ಕಿರಿಮಂಜೇಶ್ವರ

# ಸಾಲುದ್ದದ ಸುದ್ದಿಗಳು

ಭಾರತದ ಜಿ20 ಅಧ್ಯಕ್ಷ ಸ್ಥಾನದ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಸಚಿವಾಲಯವು ಹೆಚ್ಚಿನ ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯಲು 2023 ಅನ್ನು 'ವಿಸಿಟ್ ಇಂಡಿಯಾ' ವರ್ಷ ಎಂದು ಘೋಷಿಸಲು ಯೋಜಿಸಿದೆ. ಈ ಗುರಿಯನ್ನು ಸಾಧಿಸಲು, ಸಚಿವಾಲಯವು ಇತರ ಕೇಂದ್ರ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಖಾಸಗಿ ವಲಯದೊಂದಿಗೆ ಪ್ರವಾಸೋದ್ಯಮ ಕ್ಷೇತ್ರವನ್ನು ಒಗ್ಗೂಡಿಸಲು ಮುಂದಾಗಿದೆ.



ವಿಶ್ವದ ಅತಿ ಎತ್ತರದ ಮತ್ತು ಶೀತಲ ಯುದ್ಧಭೂಮಿಯನ್ನು ಸುರಕ್ಷಿತವಾಗಿರಿಸಲು ಭಾರತವು ಆಪರೇಷನ್ 'ಮೇಘದೂತ್' ಅನ್ನು ಪ್ರಾರಂಭಿಸಿದ ನಂತರ ಕಳೆದ 40 ವರ್ಷಗಳಲ್ಲಿ ಸಿಯಾಚಿನ್ ಗ್ಲೇಸಿಯರ್‌ನಂತಹ ಎತ್ತರದ ಪ್ರದೇಶದಲ್ಲಿ ಯಾವುದೇ ಮಹಿಳಾ ಅಧಿಕಾರಿಯನ್ನು ನಿಯೋಜಿಸಿರಲಿಲ್ಲ. ಆದರೆ ಈಗ ಮೊದಲ ಬಾರಿಗೆ ಭಾರತೀಯ ಸೇನೆಯ 'ಫೈರ್ ಅಂಡ್ ಫ್ಯೂರಿ' ಸ್ಯಾಪರ್ಸ್‌ನ ಕ್ಯಾಪ್ಟನ್ ಶಿವ ಚೌಹಾಣ್ ಅವರನ್ನು ವಿಶ್ವದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿರುವ ಕುಮಾರ್ ಪೋಸ್ಟ್‌ನಲ್ಲಿ ಕಾರ್ಯಾಚರಣೆಯಲ್ಲಿ ನಿಯೋಜನೆಗೊಳಿಸುವ ಮೂಲಕ ಅವರು ಮೊದಲ ಮಹಿಳಾ ಅಧಿಕಾರಿಯಾಗಿ ಹೊರಹೊಮ್ಮಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತು ಮೈಕ್ರೋಸಾಫ್ಟ್ ಭಾರತದಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಸ್ಟಾರ್ಟ್-ಅಪ್‌ಗಳ ಬೆಳವಣಿಗೆಗೆ ಉತ್ತೇಜನ ನೀಡುವ ಸಲುವಾಗಿ ಸಹಯೋಗ ಮಾಡಿಕೊಳ್ಳುವ ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದ ದೇಶದಾದ್ಯಂತ ಬಾಹ್ಯಾಕಾಶ ಟೆಕ್ ಸ್ಟಾರ್ಟ್-ಅಪ್‌ಗಳನ್ನು ತಂತ್ರಜ್ಞಾನ ಪರಿಕರಗಳು ಮತ್ತು ಪ್ಲಾಟ್‌ಫಾರ್ಮ್‌ಗಳೊಂದಿಗೆ ಸಶಕ್ತಗೊಳಿಸಲು ಪ್ರಯತ್ನಿಸಲಿದೆ.

ಭಾರತವು ಸುಡಾನ್‌ನಲ್ಲಿರುವ ಯುಎನ್ ಮಿಷನ್‌ಗೆ ಮಹಿಳಾ ಶಾಂತಿಪಾಲಕರ ತುಕಡಿಯನ್ನು ನಿಯೋಜಿಸಲಿದೆ. 2007ರಲ್ಲಿ ಲೈಬೀರಿಯಾದಲ್ಲಿ ಮೊದಲ ಬಾರಿಗೆ ಸಂಪೂರ್ಣ ಮಹಿಳಾ ತುಕಡಿಯನ್ನು ನಿಯೋಜಿಸಿದ ನಂತರ, ಯುಎನ್ ಮಿಷನ್‌ನಲ್ಲಿ 'ಮಹಿಳಾ ಶಾಂತಿಪಾಲಕ'ರ ಭಾರತದ ಅತಿದೊಡ್ಡ ಏಕದಳ ಇದಾಗಿದೆ ಎಂದು ಯುಎನ್‌ಗೆ ಭಾರತದ ಖಾಯಂ ಮಿಷನ್ ಹೇಳಿದೆ.

ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ಸರ್ಕಾರವು 3700 ಹೆಕ್ಟೇರ್ ಪ್ರದೇಶದಲ್ಲಿ ಆಯೋಜಿಸಲಿರುವ ಮಹಾಕುಂಭಮೇಳದ ಸಮಯದಲ್ಲಿ ಭಕ್ತರಿಗೆ ಪ್ರಯಾಣಿಸಲು ಅನುಕೂಲವಾಗುವಂತೆ ಉತ್ತರಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 5,000 ಹೊಸ ಬಸ್‌ಗಳನ್ನು ಸೇರಿಸುತ್ತಿದೆ. ಮೇಳದಲ್ಲಿ 40 ಕೋಟಿಗೂ ಹೆಚ್ಚು ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಂಡಿದೆ. 5,000 ಬಸ್‌ಗಳನ್ನು ಖರೀದಿಸಲು ಸರ್ಕಾರವು ಸುಮಾರು 2,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿದೆ ಎಂದು ಮುಖ್ಯಮಂತ್ರಿ ಕಚೇರಿಯಿಂದ ಅಧಿಕೃತ ಹೇಳಿಕೆ ತಿಳಿಸಿದೆ.

ಉತ್ತರಾಖಂಡದ ಜೋಶಿಮಠ ಪಟ್ಟಣವೇ ಕುಸಿಯುತ್ತಿದ್ದು, ಅಪಾಯಕಾರಿ ಮಟ್ಟವನ್ನು ತಲುಪಿದೆ. ಅಲ್ಲಿನ ಸುಮಾರು 600 ಕುಟುಂಬಗಳ ಸ್ಥಳಾಂತರ ಕಾರ್ಯ ಕ್ಷಿಪ್ರವೇಗದಲ್ಲಿ ನಡೆಯುತ್ತಿದೆ. ಪರಿಸ್ಥಿತಿಯ ಗಂಭೀರತೆಯನ್ನು ಅರಿತಿರುವ ಕೇಂದ್ರ ಸರ್ಕಾರ ಭೂಕುಸಿತ ಮತ್ತು ಅದರ ಪರಿಣಾಮಗಳ ಕುರಿತು ಕ್ಷಿಪ್ರ ಅಧ್ಯಯನ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿದೆ.

ಡಿಜಿಟಲ್ ಆವಿಷ್ಕಾರದ ಪ್ರಧಾನ ಉದ್ದೇಶ ಸಾಮಾಜಿಕ ನ್ಯಾಯವಾಗಿರಬೇಕು. ಡಿಜಿಟಲ್ ತಂತ್ರಜ್ಞಾನ ಸಮಾಜದ ದುರ್ಬಲ ಮತ್ತು ಹಿಂದುಳಿದಿರುವ ವರ್ಗಗಳನ್ನು ಒಳಗೊಳ್ಳುವುದನ್ನು ಖಚಿತಪಡಿಸುವುದಕ್ಕೆ ಭಾರತವು ಸರಿಯಾದ ಉದಾಹರಣೆಯಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನವದೆಹಲಿಯಲ್ಲಿ ಡಿಜಿಟಲ್ ಇಂಡಿಯಾ ಅವಾರ್ಡ್ಸ್ – 2022 ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದ ನಂತರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಅತಿದೊಡ್ಡ ನಕ್ಸಲ್ ವಿರೋಧಿ ಕಾರ್ಯಾಚರಣೆ ಛತ್ತೀಸ್‌ಗಢದಲ್ಲಿ ನಡೆಯುತ್ತಿದ್ದು, 'ಹೆಲಿಕಾಪ್ಟರ್‌ಗಳು, ಡ್ರೋನ್‌ಗಳು, ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಕೋಬ್ರಾ ಘಟಕದ ಕಮಾಂಡೋಗಳು, ಛತ್ತೀಸ್‌ಗಢ ಪೊಲೀಸ್ ಮತ್ತು ತೆಲಂಗಾಣ ಪೊಲೀಸರ ಗ್ರೇಹೌಂಡ್ ವಿಶೇಷ ಪಡೆಗಳ ಘಟಕವನ್ನು ಹಿಡ್ಮಾ ಗುಂಪನ್ನು ಪತ್ತೆಹಚ್ಚಲು ಕಳುಹಿಸಲಾಗಿದೆ' ಎಂದು ವರದಿಗಳು ತಿಳಿಸಿವೆ. "2024ರ ರಾಷ್ಟ್ರೀಯ ಚುನಾವಣೆಯ ಮೊದಲು ನಕ್ಸಲಿಸಂ ಅನ್ನು ಸಂಪೂರ್ಣವಾಗಿ ಕೊನೆಗೊಳಿಸಲಾಗುವುದು" ಎಂದು ಛತ್ತೀಸ್‌ಗಢದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ ಕೆಲವು ದಿನಗಳ ನಂತರ ಈ ಅತಿದೊಡ್ಡ ಕಾರ್ಯಾಚರಣೆ ನಡೆಯುತ್ತಿದೆ.



ದ್ವೇಷದ ಭಾಷಣಗಳು ಸಂಪೂರ್ಣ ಅಪಾಯಕಾರಿ ಎಂದು ಕರೆದಿರುವ ಸುಪ್ರೀಂಕೋರ್ಟ್, ಭಾರತಕ್ಕೆ ಮುಕ್ತ ಮತ್ತು ಸಮತೋಲಿತ ಮಾಧ್ಯಮದ ಅವಶ್ಯಕತೆ ಇದೆ ಎಂದು ಹೇಳಿದೆ. ಇತ್ತೀಚಿನ ದಿನಗಳಲ್ಲಿ ಎಲ್ಲವೂ ಟಿಆರ್‌ಪಿ (ಟೆಲಿವಿಷನ್ ರೇಟಿಂಗ್ ಪಾಯಿಂಟ್) ನಿಂದ ನಡೆಸಲ್ಪಡುತ್ತಿದೆ ಮತ್ತು ಚಾನಲ್‌ಗಳು ಪರಸ್ಪರ ಪೈಪೋಟಿ ನಡೆಸುತ್ತಿದ್ದು, ಸಮಾಜದಲ್ಲಿ ವಿಭಜನೆಯನ್ನು ಸೃಷ್ಟಿಸುತ್ತಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಕಳೆದ ವರ್ಷ USD 3.9 ಶತಕೋಟಿ ಸಾಲದ ಉದಾರ ಬೆಂಬಲ ನೀಡಿದ ಭಾರತಕ್ಕೆ ಶ್ರೀಲಂಕಾ ಧನ್ಯವಾದ ಅರ್ಪಣೆ ಮಾಡಿದೆ. ದೇಶದ ಸಾಲವನ್ನು ನಿರ್ವಹಿಸಲು IMFಗೆ ನೀಡಿದ ಭರವಸೆಗಾಗಿ ಶ್ರೀಲಂಕಾ ಭಾರತಕ್ಕೆ ಧನ್ಯವಾದಗಳನ್ನು ಅರ್ಪಿಸಿದೆ. ಋಣಭಾರದಲ್ಲಿರುವ ದ್ವೀಪರಾಷ್ಟ್ರದ ಆರ್ಥಿಕ ಚೇತರಿಕೆಯನ್ನು ತ್ವರಿತಗೊಳಿಸಲು ಭಾರತ ಸಾಕಷ್ಟು ನೆರವು ನೀಡುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ಮಾಡಲು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದೆ ಮತ್ತು ಅಧ್ಯಾಪಕರಿಗೆ ಸ್ವಾಯತ್ತತೆಯನ್ನು ನೀಡುತ್ತದೆ. ಇಂದು ಭಾರತವು ಅತ್ಯಧಿಕ ಸಂಖ್ಯೆಯ ವಿದ್ಯಾವಂತ ಯುವಕರನ್ನು ಹೊಂದಿರುವ ವಿಶ್ವದ ಜ್ಞಾನ ಕೇಂದ್ರವಾಗುವ ಸಾಮರ್ಥ್ಯವನ್ನು ಹೊಂದಿದೆ. ಇದು ದೇಶವನ್ನು ಮುಂದಕ್ಕೆ ಕೊಂಡೊಯ್ಯುವ ಕೌಶಲ್ಯ ಬಂಡವಾಳವಾಗಿದೆ. ದೇಶವನ್ನು ಜಾಗತಿಕ ಜ್ಞಾನದ ಸೂಪರ್ ಪವರ್ ಮಾಡುವುದೇ ನರೇಂದ್ರ ಮೋದಿ ಸರ್ಕಾರದ ಗುರಿ ಎಂದು ಕೇಂದ್ರ ಸಚಿವ ಸುಭಾಷ್ ಸರ್ಕಾರ್ ಹೇಳಿದ್ದಾರೆ.

"ಪಾಕಿಸ್ತಾನ ಭಾರತದೊಂದಿಗೆ ಹೋರಾಡಿದ ಮೂರು ಯುದ್ಧಗಳು ಜನರಿಗೆ ದುಃಖ, ಬಡತನ ಮತ್ತು ನಿರುದ್ಯೋಗವನ್ನು ತಂದಿವೆ. ಕಾಶ್ಮೀರ ಸಮಸ್ಯೆಯನ್ನು ಭಾರತ ಮತ್ತು ಪಾಕಿಸ್ತಾನಗಳು ಕುಳಿತು ಬಗೆಹರಿಸಿಕೊಳ್ಳಬೇಕು" ಎಂದು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಒತ್ತಾಯಿಸಿದ್ದಾರೆ.

ಮಾಲ್ದೀವ್ಸ್ ಹಿತಾಸಕ್ತಿಗೆ ನೆರವಾಗುತ್ತಿರುವ ಭಾರತದ ನೆರೆಹೊರೆ ಮೊದಲು ನೀತಿಯನ್ನು ಶ್ಲಾಘಿಸಿರುವ ಮಾಲ್ದೀವ್ಸ್ ವಿದೇಶಾಂಗ ಸಚಿವ ಅಬ್ದುಲ್ ಶಾಹಿದ್ ಅವರು, ಭಾರತವು ಬಿಕ್ಕಟಿನ ಸಂದರ್ಭದಲ್ಲಿ ಮೊದಲ ಸ್ಪಂದಕನಾಗಿರುತ್ತದೆ ಎಂದು ಹೇಳಿದ್ದಾರೆ. ವಿದೇಶಾಂಗ ಸಚಿವ ಜಯಶಂಕರ್ ಅವರೊಂದಿಗೆ ಹಲವರು ಒಪ್ಪಂದಗಳನ್ನು ವಿನಿಮಯ ಮಾಡಿಕೊಂಡ ಬಳಿಕ ಮಾತನಾಡಿದರು.

ಆಸ್ಟ್ರೇಲಿಯಾದಲ್ಲಿ ಹಿಂದೂ ದೇಗುಲಗಳ ಮೇಲೆ ಇತ್ತೀಚೆಗೆ ನಡೆದ ದಾಳಿಯನ್ನು ಬಲವಾಗಿ ಖಂಡಿಸುವುದಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ. ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು "ಆಸ್ಟ್ರೇಲಿಯಾದ ಕ್ಯಾರಮ್ ಡೌನ್ಸ್‌ನಲ್ಲಿರುವ ಶ್ರೀ ಶಿವ ವಿಷ್ಣು ದೇವಾಲಯದ ಜೊತೆಗೆ ಇತ್ತೀಚಿನ ದಿನಗಳಲ್ಲಿ ಇತರ ದೇಗುಲಗಳ ಮೇಲೆ ನಡೆದ ದಾಳಿಯನ್ನು ಭಾರತ ಬಲವಾಗಿ ಖಂಡಿಸುತ್ತದೆ" ಎಂದಿದ್ದಾರೆ.



पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JANUARY 2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-2-2023



# ಒಗ್ಗಟ್ಟಾಗಿ ಕೆಲಸ ಮಾಡಿ ನಮ್ಮ ರಾಷ್ಟ್ರವನ್ನು ವೈಭವದ ಉತ್ತುಂಗಕ್ಕೆ ಕೊಂಡೊಯ್ಯಬೇಕು – ಡಾ. ಮೋಹನ್ ಭಾಗವತ್

*1ನೇ ಪುಟದಿಂದ...*

ಹಿಂದು ಎಂಬುದು ನಮ್ಮ ಗುರುತು, ನಮ್ಮ ರಾಷ್ಟ್ರೀಯತೆ, ನಮ್ಮ ನಾಗರಿಕತೆಯ ಲಕ್ಷಣ–ಇದು ಎಲ್ಲರನ್ನೂ ನಮ್ಮವರೆಂದು ಪರಿಗಣಿಸುವ, ಎಲ್ಲರನ್ನೂ ನಮ್ಮೊಂದಿಗೆ ಕರೆದುಕೊಂಡು ಹೋಗುವ ಗುಣ. ನಮ್ಮದು ಮಾತ್ರ ಸತ್ಯ, ನಿಮ್ಮದು ಸುಳ್ಳು ಎಂದು ನಾವೆಂದೂ ಹೇಳುವುದಿಲ್ಲ. ನಿಮ್ಮ ಪ್ರಕಾರ ನೀವು ಸರಿ; ನಮ್ಮ ಪ್ರಕಾರ ನಾವು. ಇನ್ನೇಕೆ ಕಾದಾಡಬೇಕು? ಒಟ್ಟಿಗೆ ಸಾಗೋಣ – ಇದು ಹಿಂದುತ್ವ. ಈ ಮೌಲ್ಯವನ್ನು ಅನುಸರಿಸುವವರು ಬಹುಸಂಖ್ಯೆಯಲ್ಲಿ ಇರುವವರೆಗೆ ಭಾರತ ಅಖಂಡವಾಗಿರುತ್ತದೆ. ಈ ಏಕೀಕೃತ ಭಾರತವು ಇಡೀ ಜಗತ್ತಿಗೆ ಒಗ್ಗಟ್ಟನ್ನೂ, ಶಕ್ತಿಯನ್ನೂ ಒದಗಿಸುತ್ತದೆ. ಇದು ಕೇವಲ ಭಾರತಕ್ಕೆ ಸಂಬಂಧಿಸಿದ್ದಲ್ಲ, ಬದಲಾಗಿ ಮಾನವಕುಲದ ಕಲ್ಯಾಣಕ್ಕೆ ಸಂಬಂಧಿಸಿದ್ದು. ಹಿಂದು ಸಮಾಜವು ಕಣ್ಮರೆಯಾದಲ್ಲಿ ಅದರ ಪರಿಣಾಮಗಳನ್ನು ಒಂದು ಕ್ಷಣ ಊಹಿಸಿ. ಇತರ ಜನಾಂಗಗಳು ತಮ್ಮ ತಮ್ಮ ಪ್ರಾಬಲ್ಯಕ್ಕಾಗಿ ಯುದ್ಧವನ್ನು ಪ್ರಾರಂಭಿಸುತ್ತವೆ. ಆ ದುಃಸ್ಥಿತಿಯಲ್ಲಿ ಜಗತ್ತನ್ನು ರಕ್ಷಿಸಲು ಇರುವ ಒಂದೇ ಒಂದು ಆಶಾಕಿರಣ ಎಂದರೆ ಅದು 'ಹಿಂದುತ್ವ' ಮಾತ್ರ.

ಅಂತಿಮ ಸತ್ಯವೆಂದರೆ, ಹಿಂದೂಸ್ಥಾನವು ಹಿಂದೂಸ್ಥಾನವಾಗಿಯೇ ಉಳಿಯಬೇಕು. ಇಂದು ಭಾರತದಲ್ಲಿ ವಾಸಿಸುತ್ತಿರುವ ಮುಸ್ಲಿಮರಿಗೆ ಯಾವುದೇ ತೊಂದರೆಯಿಲ್ಲ. ಅವರು ತಮ್ಮ ನಂಬಿಕೆಗೆ ಅಂಟಿಕೊಂಡಿರಲು ಇಷ್ಟಪಟ್ಟರೆ ಹಾಗೆಯೇ ಇರಬಹುದು. ತಮ್ಮ ಪೂರ್ವಜರ ನಂಬಿಕೆಗೆ ಮರಳಲು ಇಚ್ಛಿಸಿದರೆ ಅದನ್ನೂ ಮಾಡಬಹುದು. ಇದರ ಆಯ್ಕೆ ಸಂಪೂರ್ಣವಾಗಿ ಅವರದ್ದು. ಹಿಂದುಗಳಿಗೆ ಯಾವುದೇ ಹಠವಿಲ್ಲ. ಹಾಗಾಗಿ ಮುಸ್ಲಿಮರು ಭಯಪಡುವ ಅಗತ್ಯವಿಲ್ಲ. ಆದರೆ, ಮುಸ್ಲಿಮರು ತಮ್ಮ ಶ್ರೇಷ್ಠತೆಯ ವ್ಯಸನವನ್ನು ತ್ಯಜಿಸಬೇಕು. ನಾವು ಉತ್ಕೃಷ್ಟ ಜನಾಂಗ; ನಾವು ಒಮ್ಮೆ ಈ ಭೂಮಿಯನ್ನು ಆಳಿದ್ದೇವೆ, ಮತ್ತೊಮ್ಮೆ ಆಳುತ್ತೇವೆ; ನಮ್ಮ ದಾರಿ ಮಾತ್ರ ಸರಿ, ಇತರರದ್ದು ತಪ್ಪು; ನಾವು ಭಿನ್ನವಾಗಿದ್ದೇವೆ, ನಾವು ಹಾಗೆಯೇ ಮುಂದುವರಿಯುತ್ತೇವೆ; ನಾವು ಇತರರೊಟ್ಟಿಗೆ ಬದುಕಲು ಸಾಧ್ಯವಿಲ್ಲ–ಈ ರೀತಿಯ ಗುಣವನ್ನು ಬಿಡಬೇಕು. ಇಲ್ಲಿ ಬದುಕುವ ಹಿಂದುಗಳು, ಕ್ರಿಶ್ಚಿಯನ್ನರು ಯಾರೇ ಆಗಿರಲಿ ಈ ಗುಣವನ್ನು ತ್ಯಜಿಸಲೇಬೇಕು.

ಹಾಗಾಗಿ ಜನಸಂಖ್ಯಾ ಅಸಮತೋಲನ ಬಹುಮುಖ್ಯವಾದ ಸಮಸ್ಯೆಯಾಗಿದೆ. ನಾವೆಲ್ಲರೂ ಆ ಕುರಿತು ಗಂಭೀರವಾಗಿ ಯೋಚಿಸಬೇಕಿದೆ. ಈ ಮಾತೆತ್ತಿದರೆ ವಿರೋಧ ಮತ್ತು ಆರೋಪಗಳು ತೂರಿಬರುತ್ತವೆಂಬ ಅರಿವಿದೆ. ಆದರೆ ಅದೇ ಜನ ಆಡಳಿತಾತ್ಮಕ ಸ್ಥಾನಗಳಲ್ಲಿ ಕುಳಿತಾಗ ಅವರು ಕೂಡ ಇದೇ ಕೆಲಸವನ್ನು ಮಾಡುತ್ತಾರೆ. ನೀವು ಸ್ವತಂತ್ರ ಭಾರತದ ಸರ್ಕಾರಿ ಕಾರ್ಯಗಳನ್ನು ನೋಡಿದರೆ, ಪ್ರಾರಂಭದ ದಿನದಿಂದ ಇಲ್ಲಿಯವರೆಗೆ, ಅಧಿಕಾರದಲ್ಲಿರುವವರೆಲ್ಲರೂ ತಮ್ಮ ನಂಬಿಕೆಗಳು ಏನೇ ಇದ್ದರೂ ಅದನ್ನು ಲೆಕ್ಕಿಸದೆ ಈ ಸಮಸ್ಯೆಯ ಬಗ್ಗೆ ಚಿಂತಿಸಿದ್ದಾರೆ. ಅಧಿಕಾರದಲ್ಲಿದ್ದು ಭಾರತದ ಪ್ರಗತಿಯನ್ನು ಬಯಸುವವರೆಲ್ಲರೂ ಈ ಸಮಸ್ಯೆಯನ್ನು ಕೈಗೆತ್ತಿಕೊಂಡು ಅದಕ್ಕೆ ಅಗತ್ಯವಿರುವ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಎಲ್ಲರಿಗೂ ತಿಳಿದಿರುವ ಈ ವಿಷಯವನ್ನು ನಾವು ಪುನರುಚ್ಚರಿಸುತ್ತಿದ್ದೇವೆ.

ನಮಗೆ ಯಾರನ್ನೂ ವಿರೋಧಿಸುವ ಅಗತ್ಯವಿಲ್ಲ. ಮತ್ತು ಇದು ಜನನಪ್ರಮಾಣಕ್ಕೆ ಮಾತ್ರ ಸಂಬಂಧಿಸಿದ ಪ್ರಶ್ನೆಯೂ ಅಲ್ಲ. ಮತಾಂತರ ಮತ್ತು ಅಕ್ರಮ ವಲಸೆಗಳು ಜನಸಂಖ್ಯಾ ಅಸಮತೋಲನದ ಹಿಂದಿನ ಬಹುಮುಖ್ಯ ಕಾರಣಗಳು. ಇದನ್ನು ತಡೆದರೆ ಮತ್ತೆ ಜನಸಂಖ್ಯೆಯಲ್ಲಿ ಸಮತೋಲನ ತರಲು ಸಾಧ್ಯವಿದೆ; ಇದನ್ನು ನಾವು ನೋಡಿದ್ದೇವೆ. ಆದ್ದರಿಂದ ಜನಸಂಖ್ಯಾ ನೀತಿಯು ಇದನ್ನು ಮೊದಲು ಅರಿತುಕೊಳ್ಳಬೇಕು. ಜನನಪ್ರಮಾಣ ಅಥವಾ ಇತರ ಸಮಸ್ಯೆಗಳಿಂದಾಗಿ ಸ್ವಲ್ಪ ಅಸಮತೋಲನವಿರಬಹುದು, ಆದರೆ ಅದನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

**ಕೋವಿಡ್–19 ಒಬ್ಬ ವ್ಯಕ್ತಿಗೋ ಕುಟುಂಬಕ್ಕೋ ಮಾತ್ರವಲ್ಲದೆ ಇಡೀ ಜಗತ್ತಿನ ಮೇಲೆ ಪರಿಣಾಮ ಬೀರಿದೆ. ಜನ ಜಗತ್ತಿನ ಹೊಸ ಉಪಕ್ರಮದ ಕುರಿತು ಮಾತಾಡತೊಡಗಿದ್ದಾರೆ. ಈ ಎಲ್ಲ ಏರುಪೇರುಗಳು, ಬದಲಾವಣೆಗಳನ್ನು ನೋಡಿದರೆ, ನಿಮ್ಮ ಪ್ರಕಾರ ಮುಂದಿನ ದಿನಗಳಲ್ಲಿ ಭಾರತದ ಚಿತ್ರಣ ಹೇಗಿರಬಹುದು? ಈ ಆಧುನಿಕ ಜಗತ್ತಿನಲ್ಲಿ ಭಾರತದ ಪಾತ್ರವೇನು? ಆ ಭಾರತದಲ್ಲಿ ಸಂಘದ ಪಾತ್ರವೇನು?**

ಈ ಹೊಸ ಕ್ರಾಂತಿಯಲ್ಲಿ ನೈಜ ಭಾರತ ಹೊರಹೊಮ್ಮಿದೆ. ಈ ಸಾಂಕ್ರಾಮಿಕ ರೋಗ ಬಂದಿರದಿದ್ದರೆ, ಭಾರತ ಇಡೀ ಜಗತ್ತಿಗೆ ಬೆಳಕು ನೀಡುವಂತಹ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಾಗುತ್ತಿರಲಿಲ್ಲ. ನಾವಿಂದು ಸರಿಯಾದ ದಿಕ್ಕಿನಲ್ಲಿ ಮುನ್ನಡೆಯುತ್ತಿದ್ದೇವೆ. ಇದರರ್ಥ ನಾವು ಮೊದಲು ಸರಿಯಾದ ಹಾದಿಯಲ್ಲಿ ನಡೆಯುತ್ತಿರಲಿಲ್ಲ ಎಂದಲ್ಲ, ಬದಲಾಗಿ ಜಗತ್ತು ನಮ್ಮನ್ನು ಸ್ಪಷ್ಟವಾಗಿ ನೋಡಿರಲಿಲ್ಲ. ಭಾರತವನ್ನು ನೋಡುವ ಜಗತ್ತಿನ ದೃಷ್ಟಿಗೆ ಮಂಜು ಕವಿದಿತ್ತು. ಕೋವಿಡ್–19ರ ನಂತರ ಮಂಜು ಕಳೆದು ದೃಷ್ಟಿ ಸ್ಪಷ್ಟವಾಯಿತು. ಭಾರತದ ಕೈಯಲ್ಲಿ ಪರಿಹಾರಸೂತ್ರವಿದೆ ಎಂಬುದು ಜಗತ್ತಿಗೆ ತಿಳಿದಿದೆ. ಇದೇ ಸಂಗತಿ ಜಗತ್ತು ನಮ್ಮನ್ನು ಸಂಪೂರ್ಣ ಹೊಸ ರೀತಿಯಲ್ಲಿ ನೋಡುವಂತೆ ಮಾಡಿತು. ಭಾರತ ತ್ವರಿತವಾಗಿ ಲಸಿಕೆಯನ್ನು ತಯಾರಿಸಿತು. ತನ್ನೊಬ್ಬನಿಗಾಗಿ ಅದನ್ನು ಕ್ರೋಢೀಕರಿಸಿಡದೆ ಇಡೀ ಜಗತ್ತಿಗೆ ಲಸಿಕೆಯನ್ನು ವಿತರಿಸಿತು. ಭಾರತ ತನ್ನ ಲಾಭ–ನಷ್ಟಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಇತರ ದೇಶಗಳಿಗೆ ಸಹಾಯ ಮಾಡಿದ ಘಟನೆಗಳು ಈ ಹಿಂದೆಯೂ ನಡೆದಿವೆ. ಉದಾಹರಣೆಗೆ ಹಿಂದೆ ಭಾರತವು ಶ್ರೀಲಂಕಾಕ್ಕೆ ಸಹಾಯ ಮಾಡಿತ್ತು. ಇಂದು ಉಕ್ರೇನ್‌ಗೆ ಸಹಾಯ ಮಾಡುತ್ತಿದೆ. ಭಾರತ ಉನ್ನತವಾದ ಸ್ಥಾನಕ್ಕೆ ಏರುತ್ತಿದೆ ಮತ್ತು ಭಾರತ ಉತ್ಕೃಷ್ಟವಾದ ಮೌಲ್ಯಗಳನ್ನು ಹೊಂದಿದ ರಾಷ್ಟ್ರ ಎಂಬುದು ಅವರಿಗೆ ಅರ್ಥವಾಗಿದೆ.

ಹಾಗಾದರೆ ಯಾವುದು ಈ ಮೌಲ್ಯ? ಈ ಮೌಲ್ಯ ಭಾರತದ ಮೂಲಬೇರನ್ನು ಪ್ರತಿನಿಧಿಸುತ್ತದೆಯೇ ಹೊರತು ಆಧುನಿಕ ವಿಜ್ಞಾನದ ಮ್ಯಾಜಿಕ್‌ನಲ್ಲ. ಇದು ಕೇವಲ ಭಾರತದ ಉದ್ಯಮಿಗಳು ಎಷ್ಟು ನಿಷ್ಣಾತರು ಎಂಬ ಪ್ರಶ್ನೆಯಲ್ಲ, ಅವರು ಎಂದಿಗೂ ತಮ್ಮ ವೃತ್ತಿಯಲ್ಲಿ ಪರಿಣತರಾಗಿಯೇ ಇದ್ದಾರೆ. ಆದರೆ ಇದು ಇತರರನ್ನು ಅದರಲ್ಲೂ ವಿಶೇಷವಾಗಿ ಯುವಜನರನ್ನು ಪ್ರಶ್ನಿಸಬೇಕಾದ ಸಂಗತಿಯಾಗಿದೆ.

ಭಾರತ ಪ್ರಪಂಚದ ಅನುಕೂಲಕ್ಕಾಗಿ ಕೆಲಸ ಮಾಡುತ್ತದೆ. ಭಾರತ ನವೋತ್ಥಾನದ ಮಾರ್ಗವನ್ನು ಅನ್ವೇಷಿಸಬೇಕೆಂದು ಜಗತ್ತು ಬಯಸುತ್ತದೆ. ಹಾಗೆಯೇ ಅದನ್ನು ಸಾಧಿಸುವುದು ಭಾರತದಿಂದ ಮಾತ್ರ ಸಾಧ್ಯವಾಗುವಂಥದ್ದು. ಭಾರತ ಪ್ರಗತಿಯ ಹಾದಿಯಲ್ಲಿ ಮುನ್ನಡೆಯಬೇಕೆಂದರೆ, ಪ್ರತಿಯೊಬ್ಬ ಭಾರತೀಯನೂ 'ಸ್ವ'ತ್ವವನ್ನು ಅರಿತುಕೊಳ್ಳಬೇಕಿದೆ.

**ಈ ದಿನಗಳಲ್ಲಿ, ಹಿಂದುಗಳ ಮಾನವ ಹಕ್ಕುಗಳ ಪ್ರಶ್ನೆಯೂ ಗಮನ ಸೆಳೆಯುತ್ತಿದೆ. ಹಿಂದು ಸಮಾಜ ವಿಶ್ವಾದ್ಯಂತ ವಿಶ್ವಾಸಾರ್ಹತೆಯನ್ನು ಗಳಿಸುತ್ತಿದೆ. ಅಮೆರಿಕಾದಂತಹ ದೇಶಗಳಲ್ಲಿ ಹಿಂದು ದೇವಾಲಯಗಳು ಮತ್ತು ಟ್ರಸ್ಟ್‌ಗಳು ಹಿಂದು ಸಮಸ್ಯೆಗಳ ಕುರಿತು ಧ್ವನಿಯೆತ್ತುತ್ತಿವೆ. ಒಂದೆಡೆ ಹಿಂದುತ್ವದ ಕುರಿತಾದ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ, ಸಂಘದ ಪ್ರೇರಣೆಯಿಂದ ಹಿಂದು ಸಮಾಜ ಆಕ್ರಮಣಕಾರಿಯಾಗಿ ಬದಲಾಗಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಮತ್ತೊಂದೆಡೆ, ಬರ್ಮಿಂಗ್‌ಹ್ಯಾಮ್ ಮತ್ತು ಲೀಸೆಸ್ಟರ್‌ನಲ್ಲಿ ಸಂಘದ ಹೆಸರಿನಲ್ಲಿ ಹಿಂದುಗಳನ್ನು ಗುರಿಯಾಗಿಸುತ್ತಿರುವ ಉದಾಹರಣೆಯೂ ನಮ್ಮ ಮುಂದಿದೆ. ಈ ಸಮಸ್ಯೆಯನ್ನು ಎದುರಿಸಲು ಸಂಘವು ಏನನ್ನಾದರೂ ಮಾಡಲು ಪ್ರಯತ್ನಿಸುತ್ತಿದೆಯೇ? ಜಾಗತಿಕ ಮಟ್ಟದಲ್ಲಿ ಹಿಂದುಗಳ ಮಾನವ ಹಕ್ಕುಗಳು ಮತ್ತು ಹಿಂದುಫೋಬಿಯಾ ಬಗ್ಗೆ ಸಂಘದಲ್ಲಿ ಯಾವುದಾದರೂ ಚಿಂತನೆ ನಡೆದಿದೆಯೇ?**

ಹಿಂದುಗಳ ಪರವಾಗಿ ಮಾತನಾಡುವ ಜನ ಹಲವರಿದ್ದಾರೆ. ಈ ಸಮಸ್ಯೆಗಳಿಗೆ ಪರಿಹಾರ ಹುಡುಕಲು ನಾವು ನಮ್ಮದೇ ಆದ ವೇದಿಕೆಯೊಂದನ್ನು ನಿರ್ಮಾಣ ಮಾಡುವುದಿಲ್ಲ. ಆದರೆ ಹಿಂದುಗಳಲ್ಲಿ ಶಕ್ತಿ ತುಂಬುವುದೇ ನಮ್ಮ ಯೋಜನೆ. ಹಿಂದು ಸಮಾಜವು ಜಾಗೃತವಾಗುತ್ತಿರುವುದರಿಂದ, ಬೆಂಕಿಯೊಂದಿಗೆ ಹೋರಾಡುವ ಈ ಮಾರ್ಗದ ಮೂಲಕವೇ ನಾವು ಸಾಗಬೇಕಿದೆ. ನಮ್ಮ ಏಳ್ಗೆಯಿಂದ ಯಾರ ಸ್ವಾರ್ಥ ಮತ್ತು ಸ್ವಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತಿದೆಯೋ ಅವರು ಮಾತ್ರ ಗದ್ದಲ ಎಬ್ಬಿಸುತ್ತಿದ್ದಾರೆ ಮತ್ತು ದಾಳಿ ನಡೆಸುತ್ತಿದ್ದಾರೆ. ಆದರೆ ಹಿಂದುಗಳು ಈಗ ಜಾಗೃತರಾಗಿದ್ದಾರೆ. ಎಲ್ಲ ದಾಳಿಗಳನ್ನು ಅವರು ಸಮರ್ಥವಾಗಿ ಎದುರಿಸುತ್ತಾರೆ. ಆದರೆ ಹಿಂದುಗಳು ಯಾವ ದಾರಿಯನ್ನು ಆಯ್ಕೆ ಮಾಡಿಕೊಂಡರೂ ಅವರು ಎಲ್ಲರನ್ನೂ ತಮ್ಮೊಡನೆ ಕೊಂಡೊಯ್ಯುತ್ತಾರೆಂಬುದು ನಿಶ್ಚಿತ. ಹಿಂದು ಸಮಾಜದ ಮೇಲೆ ಎಂಥ ಆಕ್ರಮಣಗಳು ನಡೆದರೂ ಜಾಗತಿಕ ಹಿಂದು ಸಮಾಜ ಅದನ್ನು ಎದುರಿಸಲು ಸಂಪೂರ್ಣ ಬೆಂಬಲ ನೀಡುತ್ತದೆ. ಈ ಪರಿಸ್ಥಿತಿ ಮುಂದುವರೆಯುವಂತೆ ಹಾಗೂ ದಿನೇದಿನೇ ಬಲವಾಗುವಂತೆ ಸಂಘವು ನೋಡಿಕೊಳ್ಳುತ್ತದೆ.

ಜಾಗತಿಕವಾಗಿ ಮಾತ್ರವಲ್ಲದೆ ಭಾರತದಲ್ಲೂ ಇರುವ ಈ ಸಮಸ್ಯೆಯ ಬಗ್ಗೆ ನಾವೆಲ್ಲ ಗಮನ ಹರಿಸಬೇಕಿದೆ. ನಾವು ಈಗಾಗಲೇ ಇದಕ್ಕೆ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವನ್ನು ಮುಂದುವರೆಸಿದ್ದೇವೆ. ಮಾಧ್ಯಮದೊಂದಿಗೆ ನಮ್ಮ ಸಂವಹನವನ್ನು ಹೆಚ್ಚಿಸಿದ್ದೇವೆ, ಹೆಚ್ಚಿನ ಜನಗಳಿಗೆ ತಲುಪುವಂತೆ ಹಲವು ಉಪಕ್ರಮಗಳನ್ನು ಪ್ರಾರಂಭಿಸಿದ್ದೇವೆ. ಈಗ ಇದನ್ನು ವಿಸ್ತರಿಸುವ ಅಗತ್ಯವಿದೆ. ನಿಗದಿತ ಸಮಯದಲ್ಲಿ ನಿರೀಕ್ಷಿತ ಫಲಿತಾಂಶಗಳನ್ನು ಪಡೆಯಬೇಕಾದಲ್ಲಿ ನಾವೂ ಕೂಡ ಸರಿಯಾದ ಸಮಯದಲ್ಲಿ ಸರಿಯಾದ ತಂತ್ರದ ಮೂಲಕ ಕಾರ್ಯನಿರ್ವಹಿಸಬೇಕಾಗುತ್ತದೆ. ನಾವು ಖಂಡಿತವಾಗಿ ಇದನ್ನು ಮಾಡಿಯೇ ಮಾಡುತ್ತೇವೆ, ಆದರೆ ಇಲ್ಲಿರುವುದು ಕೇವಲ ಸಮಯದ ಪ್ರಶ್ನೆ.

**2025ರಲ್ಲಿ ಸಂಘವು ತನ್ನ ನೂರು ವರ್ಷಗಳನ್ನು ಪೂರೈಸುತ್ತಿದೆ. ಇಡೀ ಜಗತ್ತು ಈ ಬೆಳವಣಿಗೆಯನ್ನು ತೀವ್ರ ಕುತೂಹಲದಿಂದ ನೋಡುತ್ತಿದೆ. ಈ ಸಂದರ್ಭದಲ್ಲಿ ಸಂಘ ತನ್ನ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷವಾದ ಏನನ್ನಾದರೂ ಯೋಜಿಸಿದೆಯೇ? ಸಂಘಕ್ಕೆ ಹೊಸ ಧ್ಯೇಯ ಅಥವಾ ಹೊಸ ದೃಷ್ಟಿಕೋನವನ್ನು ಸೇರಿಸಲಾಗುತ್ತದೆಯೇ?**

ಸಂಘ ಅನ್ಯಾನ್ಯ ಮುಖಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಸಂಘದ ಪ್ರಗತಿ ಸ್ವಾಭಾವಿಕವಾದದ್ದು. ಆದರೆ ಜಗತ್ತು ಇದನ್ನು ವಿಶೇಷವೆಂದು ಪರಿಗಣಿಸುತ್ತದೆ. ಡಾಕ್ಟರ್‌ಜೀ ಬದುಕಿದ್ದಾಗ ನಾವು ಹಿಂದು ಸಮಾಜವನ್ನು ಸಂಘಟಿಸುವ ತಂತ್ರ ಮತ್ತು ವಿಧಾನಗಳನ್ನು ಕಂಡುಕೊಂಡೆವು. ಡಾಕ್ಟರ್‌ಜೀ ಹೊರಟುಹೋದರು. ಆದರೆ, ಆ ವಿಧಾನವನ್ನು ಅನುಸರಿಸಿ ಸಂಘ ತನ್ನ ಯೋಜನೆಗಳನ್ನು ವಿವಿಧ ಸ್ತರಗಳಿಗೆ ವಿಸ್ತರಿಸಿಕೊಂಡಿತು. ಮೊದಲು ಜಿಲ್ಲಾಮಟ್ಟವನ್ನು ತಲುಪಿ, ನಂತರ ಅದನ್ನೂ ಮೀರಿ ಬೆಳೆದುನಿಂತಿತು. ಇದೆಲ್ಲ ನಡೆದದ್ದು ಗುರೂಜಿಯವರ ಕಾಲದಲ್ಲಿ. ಈ ಅವಧಿಯಲ್ಲಿ ಮಾರ್ಗದರ್ಶನ ಪಡೆದ ಸ್ವಯಂಸೇವಕರು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಸಂಘದ ಸೂತ್ರಕ್ಕೆ ತಕ್ಕಂತೆ ಅವರಿಗೆ ತರಬೇತಿ ನೀಡಲಾಯಿತು – 'ಸಂಘ ಏನನ್ನೂ ಮಾಡುವುದಿಲ್ಲ, ಸ್ವಯಂಸೇವಕ ಏನನ್ನೂ ಬಿಡುವುದಿಲ್ಲ' ಎಂಬಂತೆ ಸ್ವಯಂಸೇವಕರ ಕಾರ್ಯ ವ್ಯಾಪಿಸತೊಡಗಿತು. ಬಾಳಾಸಾಹೇಬರ ಕಾಲದಲ್ಲಿ, ಇದು ಹೆಚ್ಚು ವೇಗವಾಗಿ, ಮತ್ತಷ್ಟು ಬಲ ಗಳಿಸಿತು. ಸಂಘವು ಹೆಚ್ಚು ಸಮಾಜಾಧಾರಿತವಾಯಿತಲ್ಲದೆ ಸಾಮಾಜಿಕ ಜವಾಬ್ದಾರಿಗಳನ್ನೂ ಹೊತ್ತುಕೊಳ್ಳತೊಡಗಿತು. ಈ ಪರಿಣಾಮವಾಗಿ ರಾಜಕೀಯ ಕ್ಷೇತ್ರದಲ್ಲಿ ಒಂದಿಷ್ಟು ಪ್ರಗತಿ ಕಂಡುಬಂತು. ಇದನ್ನು ನಾವು ರಜ್ಜು ಭಯ್ಯಾ ಮತ್ತು ಸುದರ್ಶನ್‌ಜೀಯವರ ಅವಧಿಯಲ್ಲಿ ಕಂಡಿದ್ದೇವೆ.

ಇಂದು ಸಂಘ ಮತ್ತು ಸಮಾಜದ ನಡುವೆ ಮೌಲ್ಯಯುತವಾದ, ಶಕ್ತಿಯುತವಾದ ಮತ್ತು ಭಾವನಾತ್ಮಕವಾದ ನಂಟು ಬೆಳೆದಿದೆ. ಸಂಘದ ಕಾರ್ಯಗಳು ಎಲ್ಲೆಡೆ ವ್ಯಾಪಿಸಬೇಕೆಂದು ಪ್ರತಿಕ್ರಿಯೆಗಳು ಕೇಳಿಬರುತ್ತಿವೆ. ಹಿಂದು ಸಮಾಜ ಹೊಂದಿರಬೇಕಾದ ಪರಿವರ್ತನೆ ಮತ್ತು ಸಮನ್ವಯವನ್ನು ಸಾಧಿಸಲು ಸಂಘ ಕೆಲಸ ಮಾಡುತ್ತಿದೆ. ನಮ್ಮ ಸ್ವಯಂಸೇವಕರು ಮತ್ತು ಸಮಾಜದ ಪ್ರಜ್ಞಾವಂತರು ಈ ಕಾರ್ಯವನ್ನು ಸಾಧಿಸಬೇಕು. ಒಗ್ಗಟ್ಟಾಗಿ ಕೆಲಸ ಮಾಡಿ ನಮ್ಮ ರಾಷ್ಟ್ರವನ್ನು ವೈಭವದ ಉತ್ತುಂಗಕ್ಕೆ ಕೊಂಡೊಯ್ಯಬೇಕು. ಆದ್ದರಿಂದ ನಾವು ನೂರು ವರ್ಷಗಳನ್ನು ಪೂರೈಸುವ ಹೊತ್ತಿಗೆ ಸಂಘದ ಮೂಲಶಕ್ತಿಯಾದ ಶಾಖೆ ಮತ್ತು ಸ್ವಯಂಸೇವಕರ ಅಗತ್ಯ ಸೌಕರ್ಯಗಳನ್ನು ಹೊಂದಬೇಕು. ಅವರ ನಿಯೋಜನೆಗೆ ವ್ಯವಸ್ಥೆ ಮಾಡಬೇಕು. ಈ ಅಗತ್ಯಗಳನ್ನು ಪೂರೈಸಲು ಹೆಚ್ಚಿನ ಸ್ವಯಂಸೇವಕರನ್ನು ಸಂಘಟಿಸುವ ಸಾಮರ್ಥ್ಯವನ್ನು ನಾವು ಹೊಂದಿರಬೇಕು. ಸಂಘ ನೂರು ವರ್ಷಗಳನ್ನು ಪೂರೈಸುವಾಗ, ಸ್ವಯಂಸೇವಕರು ಇದರ ಆಧಾರದ ಮೇಲೆ ತಮ್ಮ ಕಾರ್ಯಸಾಧನೆಗಳನ್ನು ಕೈಗೊಳ್ಳುವ ಸ್ಥಿತಿಯಲ್ಲಿದ್ದಾರೆ. ಸಂಘ ವ್ಯಕ್ತಿನಿರ್ಮಾಣದ ಕಾರ್ಯವನ್ನು ಮುಂದುವರೆಸಲಿದೆ. ಈ ಸಂದರ್ಭದಲ್ಲಿ, ಸಂಘಕಾರ್ಯವನ್ನು ಎಲ್ಲೆಡೆ ವಿಸ್ತರಿಸಿ, ಸಮಾಜದ ಎಲ್ಲ ವರ್ಗಗಳೊಂದಿಗೆ ಸಂಪರ್ಕ ಸಾಧಿಸಬೇಕಿದೆ. ಇದರಿಂದ ಸಮಾಜದ ಅನುಸರಣೆಗೂ ಉತ್ತಮ ನಿದರ್ಶನಗಳು ದೊರೆಯುತ್ತವೆ. ಆದ್ದರಿಂದ ನಾವು ಬಾಲಿವುಡ್, ಮಾಧ್ಯಮ ಮತ್ತು ರಾಜಕೀಯಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ನೀಡುವುದಿಲ್ಲ. ತಮ್ಮ ತಮ್ಮ ಕರ್ತವ್ಯಗಳನ್ನು ಅರಿತುಕೊಂಡು ಸಮಾಜವೇ ಉನ್ನತ ಶಕ್ತಿಗಳ ಜೊತೆ ನಿಲ್ಲಬೇಕು. ಈ ಉನ್ನತವಾದ ಶಕ್ತಿಗಳೂ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ ಸಾಮರಸ್ಯದಿಂದ ಕೆಲಸ ಮಾಡಬೇಕು. ಅದಕ್ಕೆ ಯಾವುದೇ ಬಲ ಮತ್ತು ಕಾರ್ಯಪಡೆಗಳ ಅಗತ್ಯವಿದ್ದರೂ ಅದನ್ನು ನಾವು 2025ರ ಹೊತ್ತಿಗೆ ಸಂಘಟಿಸಬೇಕಾಗುತ್ತದೆ. ಇದನ್ನು ಎಷ್ಟರಮಟ್ಟಿಗೆ ಸಾಧಿಸುತ್ತೇವೆ ಎಂಬುದರ ಮೇಲೆ ನಮ್ಮ ಮುಂದಿನ ಸಾಧನೆ ನಿಂತಿರುತ್ತದೆ.

ಕನ್ನಡಕ್ಕೆ: **ದಿವ್ಯಾ ಹೆಗಡೆ ಕಬ್ಬಿನಗದ್ದೆ**

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.